# ಗಮಕ ದುಂದುಭಿ

ಪರಿಷತ್ತಿನ ತ್ರೈಮಾಸಿಕ ಪತ್ರಿಕೆ

ಸಂಪುಟ: 34 ಸಂಚಿಕೆ: 03 ಜುಲೈ – ಸೆಪ್ಟಂಬರ್ 2018



ಹರಿಹರದ ಶ್ರೀ ಲಕ್ಷ್ಮೀಶ ಕಲಾ ಸಂಘದ 2ನೇ ವಾರ್ಷಿಕೋತ್ಸವ



ತುಮಕೂರಿನಲ್ಲಿ ನಡೆದ "ಗಮಕ ಹಬ್ಬ -2018"



"ಗಮಕ ಜ್ಯೋತಿ ಲಕ್ಷ್ಮೀಶಂಕರ" ಕೃತಿ ಮೈಸೂರಿನಲ್ಲಿ ಲೋಕಾರ್ಪಣೆ

## ಅಖಿಲ ಭಾರತ ಪ್ರಥಮ ಹಳಗನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಗಮಕಕ್ಕೆ ಅವಕಾಶ ದೊರಕದಿರುವ ಬಗ್ಗೆ ವ್ಯಾಪಕ ಖಂಡನೆ

# ವಿವಿಧೆಡೆಯಲ್ಲಿ ನಡೆದ ಗಮಕ ಕಾರ್ಯಕ್ರಮಗಳು










# ಗಮಕ ದುಂದುಭಿಯ ಒಡಲಾಳದಲ್ಲಿ

**ಗೌರವ ಸಂಪಾದಕರು**

ಕರ್ನಾಟಕ ಕಲಾಶ್ರೀ ಗಂಗಮ್ಮ ಕೇಶವಮೂರ್ತಿ
ಮೊ : 8884672716

**ಸಂಪಾದಕರು**

ವಿದ್ವಾನ್ ಕೃ.ಪಾ. ಮಂಜುನಾಥ್
ಮೊ : 9341392624

**ಸಂಪಾದಕ ಸಲಹಾ ಮಂಡಳಿ**

ವಿದುಷಿ ಶ್ರೀಮತಿ ಶಾಂತಾ ಗೋಪಾಲ್
ವಿದ್ವಾನ್ ತೆಕ್ಕೆಕೆರೆ ಸುಬ್ರಹ್ಮಣ್ಯ ಭಟ್
ವಿದ್ವಾನ್ ಡಾ. ರಾಜೀವ ಲೋಚನ
ವಿದುಷಿ ಶ್ರೀಮತಿ ಸುಜಾತ ಗೋಪಿನಾಥ್

**ಕಛೇರಿ:**

**ಕರ್ನಾಟಕ ಗಮಕ ಕಲಾ ಪರಿಷತ್ತು (ರಿ)**
2ನೇ ಮಹಡಿ, ಬಿ.ಎಂ.ಶ್ರೀ. ಪ್ರತಿಷ್ಠಾನ,
3ನೇ ಮುಖ್ಯರಸ್ತೆ, ಎನ್. ಆರ್. ಕಾಲೋನಿ,
ಬೆಂಗಳೂರು - 560 019.

E-mail Id:
gamakadundubhi@gmail.com
karnatakagamakakalaparishat@gmail.com
Website:
www.karnatakagamakakala.org

**ಮುದ್ರಕರು:**
**ಶ್ರೀ ಅನ್ನಪೂರ್ಣ ಆಫ್‌ಸೆಟ್ ಪ್ರಿಂಟರ್ಸ್**
511, 14ನೇ ಮುಖ್ಯರಸ್ತೆ, ಸರಸ್ವತಿಪುರಂ
ಮೈಸೂರು–570 009
ದೂರವಾಣಿ: 0821–4264341

## ಪರಿವಿಡಿ

ಪುಟ ಸಂಖ್ಯೆ

| | |
|---|---|
| ಅಧ್ಯಕ್ಷರ ಲೇಖನಿಯಿಂದ.... | 2 |
| ಸಂಪಾದಕೀಯ... | 3 |
| ಗಮಕಕ್ಕೆ ಅವಕಾಶ ದೊರಕದಿರುವ ಬಗ್ಗೆ ಖಂಡನಾ ನಿರ್ಣಯ | 4 |
| ೨೦೧೭–೧೮ರ ಗಮಕ ಪರೀಕ್ಷೆಗಳ ಫಲಿತಾಂಶಗಳು | 5 |
| ನೈತಿಕತೆಯಿಂದ ಮಾತ್ರವೇ ಸ್ವಾಸ್ಥ್ಯ ಸಮಾಜ ನಿರ್ಮಾಣ– ಡಾ. ದಾದಾಪೀರ್ ನವಿಲೇಹಾಳ್ | 6 |
| ತುಮಕೂರಿನಲ್ಲಿ ನೆರವೇರಿದ ಗಮಕ ಹಬ್ಬ–೨೦೧೮ | 7 |
| "ಗಮಕಜ್ಯೋತಿ ಲಕ್ಷ್ಮೀಶಂಕರ" ಸಂಸ್ಮರಣ ಗ್ರಂಥ ಲೋಕಾರ್ಪಣೆ | 9 |
| ಕಾವ್ಯಾರ್ಥ ಚಿಂತನ – ಡಾ. ಎ.ವಿ. ಪ್ರಸನ್ನ | 11 |
| ಕ.ಸಾ.ಪ. ನಡೆಯ ಬಗ್ಗೆ ವ್ಯಾಪಕ ವಿರೋಧ | 12 |
| ಗಮಕ ಶ್ರಾವಣದ ದಶಮಾನೋತ್ಸವ–ಕಾಸರಗೋಡು | 13 |
| ಜಿಲ್ಲಾ ವರದಿಗಳು | 14 |
| ವ್ಯಕ್ತಿ ಪರಿಚಯ | 17 |
| ಗಮಕ ಪರಿಷತ್ತಿನ ಸರ್ವಸದಸ್ಯರ 36ನೆಯ ಮಹಾಸಭೆಯ ತಿಳಿವಳಿಕೆ ಪತ್ರ. | 19 |
| ಗಮಕ ಪ್ರಶ್ನೋತ್ತರ | 20 |

# ಅಧ್ಯಕ್ಷರ ಲೇಖನಿಯಿಂದ...



ಗಮಕ ಕಲಾಸಕ್ತರಿಗೆ ನಮಸ್ಕಾರಗಳು

ವ್ಯಕ್ತಿ ಒಂಟಿಯಾಗಿ ಏನನ್ನೂ ಸಾಧಿಸಲಾರ. ಸಾಮೂಹಿಕ ಪ್ರಯತ್ನದ ಫಲವಾಗಿ ಯಶಸ್ಸೆಂಬ ಅಮೃತ ಲಭಿಸಿದಾಗ, ಅದನ್ನು ನಿರ್ಮೋಹದಿಂದ ಅನುಚರರಿಗೆ ಹಂಚುವ ಮೋಹಿನಿಯೂ, ಅಪಯಶಸ್ಸೆಂಬ ಹಾಲಾಹಲ ಹೊಮ್ಮಿದಾಗ ಅದನ್ನು ಪ್ರೀತಿಯಿಂದ ಕೊರಳಲ್ಲಿ ಧರಿಸುವ ನೀಲಕಂಠನೂ, ವ್ಯಕ್ತಿಯಾಗುವುದೇ 'ಸಾಧನೆಯ ನಿಜಮರ್ಮ'. ಅಂತಹ ಸಾಧನೆಯನ್ನು ಮಾನವರೆಲ್ಲರೂ ಮಾಡಬೇಕಾದುದೇ ಮಾನವ ಧರ್ಮವೆನಿಸುವುದು.

"ಧರ್ಮ ಎಂದರೆ ಧರಿಸುವುದು, ಹಿಡಿದುಕೊಳ್ಳುವುದು ಎಂದರ್ಥ! ಪ್ರಾಣ ಶಕ್ತಿಯು ಶರೀರವನ್ನು ಧರಿಸಿದೆ; ಭೂಮಿಯು ಸೌರಾಕರ್ಷಣ ಶಕ್ತಿಯ ಮೇಲೆ ನಿಂತಿದೆ".

ಬೆಂಕಿಗೆ -ಉಷ್ಣತೆ, ಗಾಳಿಗೆ -ಬೀಸುವಿಕೆ, ಹೃದಯಕ್ಕೆ-ಬಡಿತ, ಕಿವಿಗೆ ಕೇಳ್ಮೆ, ಹೀಗೆ ಅದರದೇ ಆದ ಧರ್ಮವಿದೆ.

ಬಾಳ ಮೇಲ್ಮೆಗೆ, ಉನ್ನತಿಗೆ ಅನಿವಾರ್ಯವಾರ್ಯವಾದದ್ದು ಧರ್ಮ !
ಸುಪ್ತ ಚೇತನವನ್ನು ಜಾಗೃತಗೊಳಿಸುವ ಮಾರ್ಗದರ್ಶಿ!
ಸಂಭ್ರಾಂತ ಮನಕ್ಕೆ ಸ್ಥಿರತೆ ನೀಡುವ ಸಾಧನವಿದು.

ಸತ್ಯ, ಸಂಸ್ಕೃತಿಯ ಪೂರ್ಣ ಪರಿಚಯ ಮಾಡಿಕೊಡುವ ಮಣಿ ದರ್ಪಣ ನಮ್ಮ ಭಾರತ ಮತ್ತು ರಾಮಾಯಣಗಳು.

ಭಾರತೀಯ ಮೌಲ್ಯಗಳನ್ನೊಳಗೊಂಡ ಭಾರತ, ರಾಮಾಯಣಗಳ, ಓದುವಿಕೆ, ಹಾಡುವಿಕೆ, ಕೇಳುವಿಕೆಗಳೇ ಗಮಕ ಕಲೆಯ ಮೂಲ ಸೆಲೆ, ಮೂಲೋದ್ದೇಶ. ಆದ್ದರಿಂದಲೇ ಈಗಾಗಲೇ 'ಇನ್‌ಪೋಸಿಸ್ ಫೌಂಡೇಶನ್'ಅವರ ಸಹಕಾರದಲ್ಲಿ'ಗೋಖಲೆ ಸಾರ್ವಜನಿಕ ಸಂಸ್ಥೆ' ಯಲ್ಲಿ 'ತೊರವೆ ನರಹರಿ' ಕವಿ ವಿರಚಿತ 'ತೊರವೆ ರಾಮಾಯಣ'ದ ಸಮಗ್ರ ವಾಚನ ಮತ್ತು ವ್ಯಾಖ್ಯಾನವನ್ನು ಕನ್ನಡ ನಾಡಿನಾದ್ಯಂತ ಇರುವ ವಾಚನಕಾರರನ್ನು ಮತ್ತು ವ್ಯಾಖ್ಯಾನಕಾರರನ್ನು ರಾಜಧಾನಿಯಲ್ಲಿ ಪರಿಚಯಿಸಲು ಈ ಯೋಜನೆ ಹಮ್ಮಿಕೊಂಡಿರುವೆವು. ದಿನಾಂಕ 14-9-2018 ರಿಂದ ಪ್ರಾರಂಭವಾಗಿ ವಿವಿಧ ಕಂತುಗಳಲ್ಲಿ ನೆರವೇರಲಿದೆ.

ಇದ್ದಲ್ಲದೆ ಮೇ, ಜೂನ್, ಜುಲೈ ತಿಂಗಳಿನಲ್ಲಿ ನಡೆದ ದತ್ತಿ ಕಾರ್ಯಕ್ರಮಗಳು ಕರ್ನಾಟಕ ಗಮಕ ಕಲಾ ಪರಿಷತ್ತಿನ ವತಿಯಿಂದ ನಡೆದಿದೆ. 1-5-2018 ರಿಂದ 33 ದಿವಸಗಳ ಪರ್ಯಂತ ಸಂಪೂರ್ಣ ಜೈಮಿನಿ ಭಾರತವನ್ನು ಅನೇಕ ಕಲಾವಿದರಿಂದ ಪ್ರಮೀಳ ಮುರಳೀಧರ್ ಅವರು ನೆರವೇರಿಸಿರುತ್ತಾರೆ. ಇದೇ ರೀತಿ 2-5-2018 ರಂದು ಸತ್ಯವತಿ ರಾಮನಾಥ್ ಅವರು, 12-6-2018 ರಂದು ಸುಲೋಚನ ವಿಶ್ವನಾಥ್ ಅವರು, 9-6-2018 ರಂದು ಶೋಭ ಶಶಿಧರ್ ಅವರು, 30-5-2018 ಸುಬ್ರಹ್ಮಣ್ಯ ಭಟ್ಟರು, 15-7-2018 ರಂದು ಹಾಗೂ 30-7-2018 ರಂದು ಸಕಲ ಸಿದ್ಧರಾಜು ಅವರು ದತ್ತಿನಿಧಿ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

**ಒಂದು ವರ್ಷದಲ್ಲಿ ಒಟ್ಟಾರೆ 17 ದತ್ತಿ ಕಾರ್ಯಕ್ರಮಗಳು ನಮ್ಮ ಕರ್ನಾಟಕ ಗಮಕ ಕಲಾ ಪರಿಷತ್ತಿನ ವತಿಯಿಂದ ನಡೆದಿದೆ.**

ಆಗಸ್ಟ್ ತಿಂಗಳ 29, 30, 31ನೇ ತಾರೀಖಿನಂದು ರತ್ನಾಕರ ವರ್ಣಿಯ ರಚನೆಗಳನ್ನು ಕುರಿತಾದ ವಿಶಿಷ್ಟವಾದ ಕಾರ್ಯಾಗಾರವನ್ನು ನಡೆಸಲು ನಿರ್ಧರಿಸಲಾಗಿದ್ದು ಗಮಕಾಭಿಮಾನಿಗಳು ಮತ್ತು ಕಾವ್ಯಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಸಹಕರಿಸಬೇಕಾಗಿ ವಿನಂತಿ.

ಬನ್ನಿ ಎಲ್ಲರೂ ಸೇರಿ ಈ ಕಲೆಯನ್ನು ಸಾಧಿಸೋಣ.
ನಂಬಿಕೆ ಇಂದ ಎಲ್ಲದರ ಸಾಧನೆ !
ಭರವಸೆ ಇಂದ ಎಲ್ಲಾ ಕೆಲಸ ಸುಲಲಿತ !!
ಪ್ರೀತಿ ಇಂದ ಎಲ್ಲಾ ಕೆಲಸ ಸುಂದರ !!
ಬನ್ನಿರಿ ಕೈ ಜೋಡಿಸಿರಿ

ಇಂತಿ ನಮಸ್ಕಾರಗಳು
**ಕರ್ನಾಟಕ ಕಲಾಶ್ರೀ ಗಂಗಮ್ಮ ಕೇಶವ ಮೂರ್ತಿ**
ಅಧ್ಯಕ್ಷರು
ಕರ್ನಾಟಕ ಗಮಕ ಕಲಾ ಪರಿಷತ್ತು, ಬೆಂಗಳೂರು

**ಕಾರ್ಯಾಲಯದ ಸಮಯ:**
**ಮಧ್ಯಾಹ್ನ 1.00 ರಿಂದ 5.00**
**ವಾರದ ರಜೆ: ಮಂಗಳವಾರ**

# ಸಂಪಾದಕೀಯ...

ಆತ್ಮೀಯ ಗಮಕ ಬಂಧುಗಳೇ,



ಗಮಕ ಪರಿಷತ್ತಿನ ತ್ರೈಮಾಸಿಕ ಪತ್ರಿಕೆಯ ಹೊಸರೂಪದ ಮೂರನೇ ಆವೃತ್ತಿ ಈ ರೂಪದಲ್ಲಿ ನಿಮ್ಮ ಕೈ ಸೇರಿದೆ. ನಿಮ್ಮೆಲ್ಲರ ಸೂಕ್ತ ಸಲಹೆ -ಮಾರ್ಗದರ್ಶನ ಹಾಗೂ ತುಂಬು ಹೃದಯದ ಪ್ರೋತ್ಸಾಹದ ನುಡಿಗಳು ನಮ್ಮ ಕಾರ್ಯವನ್ನು ಮತ್ತಷ್ಟು ಗಟ್ಟಿಗೊಳಿಸಿದೆ. ಅದರ ಬಹುಮುಖ್ಯವಾಗಿ ನಮ್ಮೆಲ್ಲರ ಮೂಲ ಆಶಯವಾದ ಗಮಕ ಕಲೆಯ ಏಳಿಗೆಗೆ ಮತ್ತು ಆದರೆ ಸಾರ್ವತ್ರಿಕ ಪ್ರಚಾರಕ್ಕೆ ಸಹಕಾರಿಯಾಗಿ ನಿಲ್ಲಬೇಕಾದ ನಮ್ಮೆಲ್ಲರ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ತು ದಿವ್ಯ ನಿರ್ಲಕ್ಷ್ಯವನ್ನು ತೋರಿಸುತ್ತಿರುವುದು ಅತ್ಯಂತ ಬೇಸರದ ಸಂಗತಿಯಾಗಿದೆ.

ಇತ್ತೀಚೆಗೆ ಶ್ರವಣಬೆಳಗೊಳದಲ್ಲಿ "ಅಖಿಲ ಭಾರತ ಪ್ರಥಮ ಹಳಗನ್ನಡ ಸಾಹಿತ್ಯ ಸಮ್ಮೇಳನ"ವನ್ನು ನಡೆಸಿದ್ದು ಅತ್ಯಂತ ಅಪೇಕ್ಷಣೀಯ ಹಾಗೂ ಮೆಚ್ಚುಗೆಯ ವಿಷಯವಾದರೂ ಪಂಪ-ಪೊನ್ನ-ರನ್ನ-ನಾಗಚಂದ್ರಾದಿ ಅನೇಕ ಹಳಗನ್ನಡ ಕವಿಗಳ ಕಾವ್ಯಗಳನ್ನು ಇಂದಿಗೂ ಜೀವಂತಗೊಳಿಸಿದ ಬಹುಪಾಲು ಕೀರ್ತಿ ಗಮಕಿಗಳಿಗೇ ಸಲ್ಲಬೇಕೆಂಬುದು ನಿರ್ವಿವಾದ.

ಹೀಗಿರುವಾಗ ಮೂರು ದಿನದ ಸಮ್ಮೇಳನದಲ್ಲಿ ಎಲ್ಲೂ ಗಮಕದ ವಾಚನ-ವ್ಯಾಖ್ಯಾನವಾಗಲಿ, ಗಮಕ ರೂಪವಾಗಲಿ, ಕೊನೆಯ ಪಕ್ಷ ಇತ್ತೀಚೆಗೆ ಮಹತ್ವ ಕಳೆದುಕೊಳ್ಳುತ್ತಿರುವ ವಿಚಾರ ಗೋಷ್ಠಿಗಳಲ್ಲಾಗಲೀ 'ಗಮಕದ ಉಳಿವು' ಮತ್ತು ಬೆಳವಣಿಗೆಯ ಬಗ್ಗೆ ಅಥವಾ ಅದರ ಮಹತ್ವದ ಬಗ್ಗೆ ಯಾವುದೇ ಅವಕಾಶ ನೀಡದೇ ಇರುವುದು ಅಕ್ಷಮ್ಯ ಅಪರಾಧವೇ ಆಗಿದೆ. ಈ ಬಗ್ಗೆ ನಾಡಿನ ಮೂಲೆ-ಮೂಲೆಗಳಿಂದ ಪ್ರಜ್ಞಾವಂತ ಸಮುದಾಯವೇ ಟೀಕಿಸಿದ್ದು ಆಯೋಜಕರ ಬಗ್ಗೆ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಬಗ್ಗೆ ವ್ಯಾಪಕ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಈ ಹಿಂದೆ ನಮ್ಮ ಮೈಸೂರಿನಲ್ಲಿ ನೆರವೇರಿದ "ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲೂ ಗಮಕ ಕಲೆಯನ್ನು ನಿರ್ಲಕ್ಷಿಸಿದ್ದು ಸ್ಪಷ್ಟವಾಗಿದ್ದು ಅನೇಕ ಬಾರಿ ಪೂರ್ವಸಭೆಗಳಲ್ಲಿ ಗಮಕದ ಬಗ್ಗೆ ಗಮನಕ್ಕೆ ತಂದರೂ ಸಭೆಯಲ್ಲಿ ಒಪ್ಪಿಗೆ ನೀಡಿ ನಂತರ ಕೈ ಬಿಟ್ಟಿದ್ದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಇಂತಹ ನಡೆ ಪರಿಷತ್ತಿನ ಅಥವಾ ಅದರ ಸಂಪೂರ್ಣ ಉಸ್ತುವಾರಿ ವಹಿಸಿದ್ದ ಕೇಂದ್ರ ಕ.ಸಾ.ಪ. ಅಧ್ಯಕ್ಷರಿಗೆ ಉಚಿತವಲ್ಲ ಎಂಬುದು ಎಲ್ಲಾ ಗಮಕಾಭಿಮಾನಿಗಳ, ಪರಿಷತ್ತಿನ ಹಾಗೂ ಪತ್ರಿಕೆಯ ಅಭಿಪ್ರಾಯವಾಗಿದೆ. ಇದೇ ರೀತಿ ಮುಂದುವರೆದರೆ ಭಿನ್ನರೀತಿಯ ಹೋರಾಟ ಅನಿವಾರ್ಯವೂ ಆಗಬಹುದು. ಅದಾಗದು ಎಂಬುದು ನನ್ನ ನಂಬಿಕೆ.

ಉಳಿದಂತೆ, ಗಮಕದ ಕಾರ್ಯಕ್ರಮಗಳು ನಾಡಿನೆಲ್ಲೆಡೆ ವಿಶಿಷ್ಟವಾಗಿ ಮತ್ತು ವಿಭಿನ್ನವಾಗಿ ನೆರವೇರುತ್ತಿದ್ದು ಆಯಾ ಜಿಲ್ಲೆಗಳಲ್ಲಿ ಸ್ಥಾನಿಕವಾಗಿ,ಅರ್ಥಪೂರ್ಣವಾಗಿ ನೆರವೇರಿರುವುದು ಅತ್ಯಂತ ಮೆಚ್ಚುಗೆಯ ವಿಷಯವೆ ಆಗಿದೆ.

ಈಗಾಗಲೇ ಬೆಂಗಳೂರು, ತುಮಕೂರು, ದಾವಣಗೆರೆ, ಹಾಸನ, ಮೈಸೂರು, ಕೊಪ್ಪಳ ಇತ್ಯಾದಿ ಜಿಲ್ಲೆಗಳಿಂದ ಸಂಬಂಧಿಸಿದ ವರದಿ ಬರುತ್ತಿದ್ದು ಉಳಿದ ಜಿಲ್ಲೆಗಳಿಂದಲೂ ಅಪೇಕ್ಷಿಸುತ್ತಿದ್ದೇವೆ. 'ಗಮಕ ಸಂಬಂಧಿ' ಲೇಖನಗಳಿಗೂ ಮುಕ್ತ ಅವಕಾಶವಿದ್ದು ನಮ್ಮ gamakadundubhi@gmail.comಗೆ ಕಳುಹಿಸಿ.

ಪರಿಷತ್ತಿನ ಬೆಳವಣಿಗೆಗಾಗಿ ಮತ್ತು ಪತ್ರಿಕೆಯ ನಿರಂತರ ಪ್ರಸಾರಕ್ಕಾಗಿ ಸದಸ್ಯತ್ವ ನೋಂದಣಿ ಅಭಿಯಾನ ಅವಶ್ಯಕವಾಗಿದ್ದು ಗಮಕಾಭಿಮಾನಿಗಳನ್ನು ಪರಿಷತ್ತಿನ ಸದಸ್ಯರನ್ನಾಗಿಸುವುದು ನಮ್ಮೆಲ್ಲರ ಕರ್ತವ್ಯ. 100/- ರೂ.ಅಥವಾ 250/- ರೂ. ಕೊಟ್ಟು ಆಜೀವ ಸದಸ್ಯರಾಗಿರುವವರ ಸದಸ್ಯತ್ವ ಹಾಗೇ ಮುಂದುವರೆಯಲಿದ್ದು ಉಳಿದ 750/- ರೂ. ಅಥವಾ ಹೊಸದಾಗಿ 1000/– ರೂ. ಕೊಟ್ಟು ಆಜೀವ ಸದಸ್ಯತ್ವ ಪಡೆಯುವವರಿಗೆ ಪತ್ರಿಕೆಯನ್ನು ಪರಿಷತ್ತಿನ ವತಿಯಿಂದ ಕಳುಹಿಸಿಕೊಡಲಾಗುತ್ತದೆ. ಈಗಾಗಲೇ ಬಹಳಷ್ಟು ಮಂದಿ 1,000/- ರೂ. ನೀಡಿರುವುದಕ್ಕೆ ಪರಿಷತ್ತು ಕೃತಜ್ಞತೆಗಳನ್ನು ಅರ್ಪಿಸುತ್ತದೆ.

ಗಮಕ ಕಲೆಯನ್ನು ನಾಡಿನಾದ್ಯಂತ ಪಸರಿಸುತ್ತಿರುವ ನಾಡಿನ ಎಲ್ಲಾ ಹಿರಿಯ-ಕಿರಿಯ ಗಮಕಿಗಳನ್ನು -ವ್ಯಾಖ್ಯಾನಕಾರರನ್ನು ಹಾಗೂ ವಿಶೇಷ ಪುರಸ್ಕಾರಕ್ಕೆ ಪಾತ್ರರಾದ ಹಲವಾರು ಸಾಧಕರನ್ನು ಪತ್ರಿಕೆಯು ಆತ್ಮೀಯವಾಗಿ ಅಭಿನಂದಿಸುತ್ತದೆ.

ಪತ್ರಿಕೆಯ ಸಂಪೂರ್ಣ ಜೀವಾಳ ಗಮಕಾಭಿಮಾನಿಗಳೇ ಆಗಿದ್ದು ಪರಿಷತ್ತಿನ ಮತ್ತು ಪತ್ರಿಕೆಯ ಬೆಳವಣಿಗೆಯೊಂದಿಗೆ 'ಗಮಕ ಕಲೆಯ' ಪ್ರಸಾರಕ್ಕೆ ತಮ್ಮೆಲ್ಲರ ಸಹಕಾರವನ್ನು ವಿನಮ್ರವಾಗಿ ಕೋರುತ್ತೇನೆ.

ಗಮಕ ಕಲಾರಾಧಕ

**ವಿದ್ವಾನ್ ಕೃ.ಪಾ. ಮಂಜುನಾಥ್**

ಉಪನ್ಯಾಸಕರು ಮತ್ತು ಗಮಕ ವ್ಯಾಖ್ಯಾನಕಾರರು


**ಪತ್ರಿಕೆಗೆ ಜಾಹೀರಾತು ನೀಡಿ -**
**ಗಮಕ ಕಲೆಯನ್ನು ಪ್ರೋತ್ಸಾಹಿಸಿ**

| | | |
|---|---|---|
| ವರ್ಣರಂಜಿತ ಹೊರಪುಟ | - | 4,000/- |
| ವರ್ಣರಂಜಿತ ಒಳಪುಟ | - | 2,000/- |
| ಒಳಭಾಗದ ಪೂರ್ಣಪುಟ | - | 1,000/- |
| ಒಳಭಾಗದ ಅರ್ಧಪುಟ | - | 500/- |

# ಅಖಿಲ ಭಾರತ ಪ್ರಥಮ ಹಳಗನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಗಮಕಕ್ಕೆ ಅವಕಾಶ ದೊರಕದಿರುವ ಬಗ್ಗೆ ಖಂಡನಾ ನಿರ್ಣಯ

ಗಮಕ ಕಲೆ ಕನ್ನಡ ನಾಡಿನ ವಿಶಿಷ್ಟವಾದ ದೇಸಿ ಕಲೆ. ಕನ್ನಡದಲ್ಲಿ ಕಾವ್ಯವು ಹುಟ್ಟಿದಂದಿನಿಂದ, ಜೊತೆ–ಜೊತೆಗೇ ಬೆಳೆದು ಬಂದಿರುವ ಪ್ರಾಚೀನ ಕಲೆ. ಕನ್ನಡದ ಆದಿ ಕವಿ ಪಂಪನಿಂದ– ಕುವೆಂಪುವರೆಗಿನ ಕಾವ್ಯಗಳನ್ನು ವಾಚನದ ಮೂಲಕ, ಕನ್ನಡ ನಾಡಿನ ಮೂಲೆ ಮೂಲೆಗೆ ಓದು ಬಾರದವರಿಗೂ ತಲುಪಿಸಿದ ಕಲೆ. ಇಂದಿಗೂ ಹಳಗನ್ನಡದ ಕಾವ್ಯಗಳು ಜನರ ಮನಸ್ಸಿನಲ್ಲಿ ನೆಲೆನಿಂತಿದೆ ಎಂದರೆ ಅದಕ್ಕೆ ಮುಖ್ಯಕಾರಣ ಗಮಕವೇ. ರಾಷ್ಟ್ರಕವಿ ಕುವೆಂಪುರವರು "ಕನ್ನಡದ ಕಾವ್ಯಗಳನ್ನು ಜನರಿಗೆ ತಲುಪಿಸುವಲ್ಲಿ ಗಮಕಿಗಳ ಪಾತ್ರ ಹಿರಿದು" ಎಂಬ ಮಾತನ್ನು "ಕುಮಾರವ್ಯಾಸ ಭಾರತ" ಕ್ಕೆ ಬರೆದ ತೋರಣನಾಂದಿಯಲ್ಲಿ ಆಡಿದ್ದಾರೆ.ಇದು ಸತ್ಯವಾದ ಮಾತೂ ಆಗಿದೆ.

ಕನ್ನಡ ಸಾಹಿತ್ಯ ಪರಿಷತ್ತು ಅಖಿಲ ಭಾರತ ಪ್ರಥಮ ಹಳಗನ್ನಡ ಸಮ್ಮೇಳನವನ್ನು ಆಯೋಜಿಸಿದೆ. ಇದುತುಂಬಾ ಸಂತಸದ ವಿಷಯವೇ. ಆದರೆ ಪಂಪ–ರನ್ನ ಮೊದಲಾದವರ ಹಳಗನ್ನಡದ ಕಾವ್ಯಗಳನ್ನು ಗಮಕಿಗಳು ವಾಚನದಲ್ಲಿ ರೂಢಿಸಿಕೊಂಡಿರುವಷ್ಟು ಇಂದಿನ ಕಾಲೇಜಿನ ಉಪನ್ಯಾಸಕರೇ ರೂಢಿಸಿಕೊಂಡಿಲ್ಲ. ಆಧುನಿಕ ಕವಿಗಳಂತೂ ಈ ಕಾವ್ಯಗಳನ್ನು ನೋಡಿರುವುದೇ ಅಪರೂಪ. ಪರಿಸ್ಥಿತಿ ಹೀಗಿರುವಲ್ಲಿ, ಹಳಗನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಗಮಕವನ್ನು/ಗಮಕಿಗಳನ್ನು ಸಂಪೂರ್ಣವಾಗಿ ತಳ್ಳಿಹಾಕಲಾಗಿದೆ. "ಕವಿ ಗಮಕಿ ವಾದಿ ವಾಗ್ಮಿ" ಗಳಿಲ್ಲದ ರಾಜ ಸಭೆಗಳು ಕನ್ನಡ ನಾಡಿನಲ್ಲಿ ಇರಲೇ ಇಲ್ಲ. ಪಂಪ, ರನ್ನ, ಪೊನ್ನ, ನಾಗಚಂದ್ರ ಇವರೆಲ್ಲರೂ ತಮ್ಮ ಕಾವ್ಯಗಳಲ್ಲಿ ಈ ಅಂಶವನ್ನು ಸಾರಿ ಸಾರಿ ಹೇಳಿದ್ದಾರೆ. ಹೀಗಿರುವಾಗ ಗಮಕಿಗಳಿಲ್ಲದೆಯೇ 'ಪಂಪ ಒಂದು ಓದು' ಎಂಬ ಗೋಷ್ಠಿ ಸಮ್ಮೇಳನದಲ್ಲಿ ಆಯೋಜನೆಗೊಂಡಿದೆ. ಇದು ಸಾಧುವೇ? ಕರ್ನಾಟಕ ಗಮಕಲಾ ಪರಿಷತ್ತು (ಗಮಕದ ರಾಜ್ಯಮಟ್ಟದ ಪ್ರಾತಿನಿಧಿಕ ಸಂಸ್ಥೆ) ಹಳಗನ್ನಡ ಸಮ್ಮೇಳನದಲ್ಲಿ ಗಮಕಕ್ಕೆ ಅವಕಾಶ ಕೊಡುವಂತೆ ಸಲಹೆ/ಮನವಿಯನ್ನು ಶ್ರೀಯುತ ಮನು ಬಳಿಗಾರ್, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಪತ್ರ ಮುಖೇನ (ಕ್ರ.ಸಂ. ಕ.ಗ.ಪ.2017–18 ದಿನಾಂಕ 16/01/2018) ರಂದು ಸಲ್ಲಿಸಿತ್ತು. ಅವಕಾಶ ಕೊಡುವುದಿರಲಿ, ಸಮ್ಮೇಳನದ ಒಂದು ಆಹ್ವಾನ ಪತ್ರಿಕೆಯನ್ನು ಸಹ ಗಮಕ ಕಲಾ ಪರಿಷತ್ತಿಗೆ ಕಳುಹಿಸಿಲ್ಲ ಎಂದರೆ ಆಶ್ಚರ್ಯ. ಇದು ಕನ್ನಡಕ್ಕೆ ಸಂದ ಅವಮಾನವೇ ಸರಿ. **ಗಮಕವಿಲ್ಲದ ಹಳಗನ್ನಡ ಸಮ್ಮೇಳನ ಹಾಸ್ಯಾಸ್ಪದ–ಅರ್ಥಹೀನ.**

ಕನ್ನಡಕ್ಕೆ ಇಂದು ದೊರೆತಿರುವ ಶಾಸ್ತ್ರೀಯ ಸ್ಥಾನಮಾನದ ಹಿಂದೆ ಗಮಕಿಗಳ ಪಾತ್ರ ತುಂಬಾ ದೊಡ್ಡದಿದೆ. ಗಮಕಿಗಳು ಈ ಕಾವ್ಯಗಳನ್ನು ವಾಚನದ ಶ್ರದ್ಧೆಯಿಂದ, ವ್ಯಾಖ್ಯಾನದ ಬಲದಿಂದ ಜೀವಂತವಾಗಿರಿಸದಿದ್ದರೆ, ಇವುಗಳು ಕೇವಲ ಗ್ರಂಥಾಲಯಗಳಲ್ಲಿ ಧೂಳು ಹಿಡಿದು ಕುಳಿತಿರುತ್ತಿದ್ದವು.ಇಲ್ಲವೇ ಯಾರಿಗೂ ಅರ್ಥವಾಗದ, ಓದು ಬಾರದ ಜನರನ್ನು ಮುಟ್ಟದ, ಓದು ಬಲ್ಲವರೂ ಅರ್ಥ ಮಾಡಿಕೊಳ್ಳಲಾಗದ ಸಂಶೋಧನಾ ಪ್ರಬಂಧಗಳ ವಸ್ತುವಾಗಿರುತ್ತಿದ್ದವು. ಈ ಹಿನ್ನಲೆಯಲ್ಲಿ ಗಮಕಕ್ಕೆ ಈ ಸಮ್ಮೇಳದಲ್ಲಿ ಸ್ಥಾನ ಕೊಡಬೇಕಾಗಿತ್ತು, ಕೊಡದಿರುವುದು ತೀವ್ರತರವಾದ ಅನ್ಯಾಯ ಎಂಬ ಅಂಶವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಮನದಟ್ಟು ಮಾಡಿಕೊಡುತ್ತಾ ಇಂತಹ ತಪ್ಪು ಮುಂದೆಂದೂ ಆಗದಿರಲೆಂದೂ ಆಗ್ರಹಿಸುಹಿಸುತ್ತೇವೆ. ನಾಡಿನ ಎಲ್ಲಾ ಗಮಕಿ– ವ್ಯಾಖ್ಯಾನಕಾರರು ಹಾಗೂ ಗಮಕಾಭಿಮಾನಿಗಳೆಲ್ಲರ ಪರವಾಗಿ ಗಮಕ ಕಲಾ ಪರಿಷತ್ತು ಒಕ್ಕೊರಲಿನಿಂದ ಈ ಕ್ರಮವನ್ನು ಖಂಡಿಸುವ ಮೂಲಕ ಖಂಡನಾ ನಿರ್ಣಯವನ್ನು ಕೈಗೊಂಡಿರುತ್ತದೆ.

**ಶ್ರೀಮತಿ ಗಂಗಮ್ಮ ಕೇಶವ ಮೂರ್ತಿ ಮತ್ತು ಕಾರ್ಯಕಾರಿ ಸಮಿತಿ**
**ಕ.ಗ.ಕ.ಪ., ಬೆಂಗಳೂರು**

# 2017–18ರ ಗಮಕ ಪರೀಕ್ಷೆಗಳ ಫಲಿತಾಂಶಗಳು

**ಕರ್ನಾಟಕ ಗಮಕ ಕಲಾ ಪರಿಷತ್ತು (ರಿ)**

ಬಿ.ಎಂ. ಶ್ರೀ. ಪ್ರತಿಷ್ಠಾನ, 2ನೇ ಮಹಡಿ, 3ನೇ ಕ್ರಾಸ್,
ಎನ್.ಆರ್. ಕಾಲೋನಿ, ಬೆಂಗಳೂರು– 19. ದೂರವಾಣಿ: 26622962

**1. "ಪ್ರಥಮ" ಕಟ್ಟಿರುವವರು ಒಟ್ಟು= 179**

ಪರೀಕ್ಷೆಗೆ ಬರದಿರುವವರು ಒಟ್ಟು= 24

ಅ) ಪ್ರಥಮ ಶ್ರೇಣಿ = 108
ಆ) ದ್ವಿತೀಯ ಶ್ರೇಣಿ= 26
ಇ) ಸಾಮಾನ್ಯ= 21

1) ಮೊದಲನೆ ರ್‍ಯಾಂಕ್– ಗೀತ– ಹರಪನಹಳ್ಳಿ
2) ಎರಡನೆ ರ್‍ಯಾಂಕ್– ಸೌಮ್ಯ– ಹರಪನಹಳ್ಳಿ
3) ಮೂರನೆ ರ್‍ಯಾಂಕ್– ತೇಜಸ್– ಮೈಸೂರು

**2. ದೇವರನಾಮ ಪ್ರವೇಶ ಕಟ್ಟಿರುವವರು ಒಟ್ಟು= 139**

ಪರೀಕ್ಷೆಗೆ ಬರದಿರುವವರು ಒಟ್ಟು= 30

ಅ) ಪ್ರಥಮ ಶ್ರೇಣಿ– 70
ಆ) ದ್ವಿತೀಯ ಶ್ರೇಣಿ– 26
ಇ) ಸಾಮಾನ್ಯ ಶ್ರೇಣಿ– 13

1) ಮೊದಲನೆ ರ್‍ಯಾಂಕ್– ಶ್ರೀವಿದ್ಯಾ– ಹಾಸನ.
2) ಎರಡನೇ ರ್‍ಯಾಂಕ್– ವೀಣಾ– ಬೆಂಗಳೂರು
3) ಮೂರನೇ ರ್‍ಯಾಂಕ್– ನೀತು– ಮೈಸೂರು

**3. ದೇವರನಾಮ ಪ್ರೌಢ ಕಟ್ಟಿರುವವರು ಒಟ್ಟು = 112**

ಪರೀಕ್ಷೆಗೆ ಬರದಿರುವವರು =13

ಅ) ಪ್ರಥಮ ಶ್ರೇಣಿ– 62
ಆ)ದ್ವಿತೀಯ ಶ್ರೇಣಿ– 29
ಇ) ಸಾಮಾನ್ಯ ಶ್ರೇಣಿ– 8

1) ಮೊದಲ ರ್‍ಯಾಂಕ್– ಮಾಧವಿ– ಬೆಂಗಳೂರು
2) ಎರಡನೇ ರ್‍ಯಾಂಕ್– ತೇಜಸ್– ಮೈಸೂರು
3) ಮೂರನೇ ರ್‍ಯಾಂಕ್– ನಳಿನಿ– ಮೈಸೂರು

**4. ಕಾಜಾಣ ಕಟ್ಟಿರುವವರು = 68**

ಪರೀಕ್ಷೆಗೆ ಬರದಿರುವವರು = 22

ಅ) ಪ್ರಥಮ ಶ್ರೇಣಿ– 31
ಆ) ದ್ವಿತೀಯ ಶ್ರೇಣಿ– 12
ಇ) ಸಾಮಾನ್ಯ ಶ್ರೇಣಿ– 3

1) ಮೊದಲ ರ್‍ಯಾಂಕ್– ಸುಷ್ಮಿತ. ಜೆ. ಪಾಠಕ್– ಹರಿಹರ
2) ಎರಡನೇ ರ್‍ಯಾಂಕ್– ಶೈಲಜ.ಎಚ್. ವಿಠ್ಠಲ– ತುಮಕೂರು
3) ಮೂರನೇ ರ್‍ಯಾಂಕ್– ಲಕ್ಷ್ಮೀ ಗುರುರಾಜ್– ಬೇಲೂರು

**5. ಪಾರೀಣ ಕಟ್ಟಿರುವವರು**= 3 ಪರೀಕ್ಷೆಗೆ ಬರದಿರುವವರು = 1 ಅ) ಪ್ರಥಮ ಶ್ರೇಣಿ – 1 ಆ) ದ್ವಿತೀಯ ಶ್ರೇಣಿ – 1

## ಭಾವಪೂರ್ಣ ಶ್ರದ್ಧಾಂಜಲಿ



**ಚನ್ನಪಟ್ಟಣ ತಾಲ್ಲೂಕಿನ ಗಮಕ ಪ್ರತಿನಿಧಿಯಾಗಿ, ಉತ್ತಮ ವಾಗ್ಮಿಗಳಾಗಿ, ಪರಿಷತ್ತಿಗೆ ಅತ್ಯಂತ ನಿಕಟವರ್ತಿಯಾಗಿದ್ದ, ಸಹೃದಯರಾದ ಶ್ರೀನಿವಾಸ ಸಿ.ಬಿ. ಅವರು ಇತ್ತೀಚೆಗೆ ದೈವಾಧೀನರಾಗಿರುತ್ತಾರೆ. ಪರಿಷತ್ತು ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತದೆ.**

# ನೈತಿಕತೆಯಿಂದ ಮಾತ್ರವೇ ಸ್ವಾಸ್ಥ್ಯ ಸಮಾಜ ನಿರ್ಮಾಣ

**ಹರಿಹರದ ಶ್ರೀ ಲಕ್ಷ್ಮೀಶ ಕಲಾ ಸಂಘದ 2ನೇ ವಾರ್ಷಿಕೋತ್ಸವದಲ್ಲಿ ಡಾ. ದಾದಾಪೀರ್ ನವಿಲೇಹಾಳ್ ಅಭಿಪ್ರಾಯ**



"ಸಾಹಿತ್ಯ ಸಂಗೀತ ಇತ್ಯಾದಿ ಲಲಿತ ಕಲೆಗಳು ಇಂದಿನ ಅಗತ್ಯ" ಎಂದು ಮಹಿಳಾ ಸರ್ಕಾರಿ ಪದವಿ ಕಾಲೇಜಿನ ಪ್ರಾಚಾರ್ಯರಾದ ಡಾ.ದಾದಾಪೀರ್ ನವಿಲೇಹಾಳ್ ಆಶಯ ವ್ಯಕ್ತಪಡಿಸಿದರು.

ಹರಿಹರದ ಓಂಕಾರ ಮಠದಲ್ಲಿ ಲಕ್ಷೀಶ ಕಲಾ ಸಂಘ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಆಶ್ರಯದಲ್ಲಿ ನಡೆದ ಶ್ರೀ ಲಕ್ಷೀಶ ಕಲಾ ಸಂಘದ 2ನೇ ವಾರ್ಷಿಕೋತ್ಸವದ ಅಂಗವಾಗಿ ಹಮ್ಮಿಕೊಳ್ಳಲಾದ ಗಮಕ–ನೃತ್ಯ–ಸಂಗೀತ ಕಾರ್ಯಕ್ರಮದಲ್ಲಿ **"ಪಂಪ ಮತ್ತು ಪ್ರತಿನಾಯಕ ಸೃಷ್ಟಿ"** ವಿಷಯ ಕುರಿತು ಉಪನ್ಯಾಸ ನೀಡಿದರು.

ಅಧಿಕಾರ, ಹಣದಾಸೆ, ಸ್ವಾರ್ಥಲಾಲಸೆಗಳೇ ಮುಖ್ಯವಾಗಿರುವ ಇಂದಿನ ಸಮಾಜದಲ್ಲಿ ಮೌಲ್ಯಗಳನ್ನು ಹುಡುಕುವುದಾದರೂ ಎಲ್ಲಿ? ಎಂದು ಆತಂಕ ವ್ಯಕ್ತಪಡಿಸಿದರು.

ಜಾಗತೀಕರಣದ ಪ್ರಭಾವವು ವಸ್ತುಗಳಿಗೆ ಬೆಲೆ ಕಟ್ಟಿದಂತೆ, ಸಂಬಂಧಗಳಿಗೂ ಬೆಲೆ ಕಟ್ಟುವ ದ್ವಂದ್ವ ಮನೋಧರ್ಮಕ್ಕೆ ಸಾಹಿತ್ಯ ಮತ್ತು ಲಲಿತ ಕಲೆಗಳೇ ಪರಿಹಾರವಾಗಿ ನಿಲ್ಲಬಲ್ಲವು ಎಂದ ಅವರು ಪಂಪ ಭಾರತದಲ್ಲಿ ಸುಯೋಧನನನ್ನು ಒಂದು ಮೌಲ್ಯದ ದ್ಯೋತಕವಾಗಿ ಪಂಪ ಚಿತ್ರಿಸಿದ್ದಾನೆ ಎಂದು ಹರ್ಷ ವ್ಯಕ್ತಪಡಿಸಿದರು.

ಬೆಂಗಳೂರಿನ ಕರ್ನಾಟಕ ಗಮಕ ಕಲಾ ಪರಿಷತ್ತಿನ ಅಧ್ಯಕ್ಷರಾದ ಶ್ರೀಮತಿ ಗಂಗಮ್ಮ ಕೇಶವಮೂರ್ತಿ ಇವರು ಕಾರ್ಯಕ್ರಮ ಉದ್ಘಾಟಿಸಿ, ಗಮಕದ ಬೆಳವಣಿಗೆಗೆ ಎಲ್ಲರೂ ಶ್ರಮಿಸಬೇಕೆಂದು ಕರೆ ನೀಡಿದರು ಹಾಗೂ ರಾಮಾಯಣದ "ಸುಂದರಕಾಂಡ" ವನ್ನು ಸುಶ್ರಾವ್ಯವಾಗಿ ವಾಚಿಸಿದರು . ಅಲ್ಲದೆ ವಾಚನಕ್ಕೆ ತಕ್ಕಂತೆ ಅರ್ಥ ಪೂರ್ಣವಾಗಿ ವ್ಯಾಖ್ಯಾನಿಸಿದ ಮೈಸೂರಿನ ವಿದ್ವಾನ್ ಕೃ.ಪಾ.ಮಂಜುನಾಥ್ ಅವರು ರಾಮಾಯಣದ ಪ್ರಮುಖ ಪಾತ್ರಗಳಾದ ಶ್ರೀರಾಮ ಹಾಗೂ ಆಂಜನೇಯನ ವಿಶೇಷತೆಗಳನ್ನು ತೊರವೆಯ ರಾಮಾಯಣದ ಮುಖಾಂತರ ವಿವರಿಸಿದರು. ಕಾರ್ಯಕ್ರಮದಲ್ಲಿ ಗ್ರಾಮೀಣ ಪ್ರತಿಭೆ ಶ್ರೀ ಕೆ. ಪಂಚಾಕ್ಷರಪ್ಪ ಇವರನ್ನು ಗೌರವಿಸಲಾಯಿತು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ದಾವಣಗೆರೆ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀ ಕುಮಾರ ಬೆಕ್ಕೇರಿ ಅವರು ಮಾತನಾಡಿ ಕಾರ್ಯಕ್ರಮ ತುಂಬಾ ಅರ್ಥಪೂರ್ಣವಾಗಿದೆ ಎಂದು ಶ್ಲಾಘಿಸಿದರು.

ವಾರ್ಷಿಕೋತ್ಸವದ ಅಂಗವಾಗಿ ದೇವರನಾಮ ಹಾಗೂ ಗಮಕ ವಾಚನವನ್ನು ಶ್ರೀಮತಿ ಸುಜಾತ ಗೋಪಿನಾಥ, ಶ್ರೀಮತಿ ಉಮಾಭಟ್, ಶ್ರೀಮತಿ ಜಯಶ್ರೀ ಶ್ರೀಧರ್, ಶ್ರೀಮತಿ ಉಮಾ ಕೆ.ಎ., ಶ್ರೀಮತಿ ಪದ್ಮಜಾ ಉದಯಕುಮಾರ್ ಹಾಗೂ ಶ್ರೀಮತಿ ವಿನುತ ವಿ.ಪಾಂಡುರಂಗಿ ಇವರೆಲ್ಲರ ಶಿಷ್ಯ ಬಳಗ ಪ್ರತ್ಯೇಕ ತಂಡಗಳಲ್ಲಿ ಪ್ರದರ್ಶನ ನೀಡಿತು.

ರಾಜ್ಯಮಟ್ಟದ ಗಮಕ "ಕಾಜಾಣ" ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್‌ಗಳಿಸಿದ ಹರಿಹರದ ಕುಮಾರಿ ಸುಷ್ಮಿತ ಜೆ. ಫಾಟಕ್ ಹಾಗೂ ಗಮಕ "ಪ್ರಥಮ" ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್‌ಗಳಿಸಿದ ಹರಪನಹಳ್ಳಿಯ ಶ್ರೀಮತಿ ಗೀತಾ ಹೆಚ್‌ರಾಯಸಮ್, ದ್ವಿತೀಯ ರ್‍ಯಾಂಕ್‌ಗಳಿಸಿದ ಶ್ರೀಮತಿ ಸೌಮ್ಯ ಎಂ.ಎಸ್. ಹಾಗೂ ಇತರರನ್ನು ಸನ್ಮಾನಿಸಲಾಯಿತು.

ಸಂಜೆ 5–30ರಿಂದ ರಾಣೆಬೆನ್ನೂರಿನ ಶ್ರೀ ಮಾರ್ತಾಂಡ ನೃತ್ಯ ಮತ್ತು ಸಂಗೀತ ಕಲಾ ಕೇಂದ್ರದ ಕಲಾವಿದರು ಮನಮೋಹಕ ನೃತ್ಯ ಪ್ರದರ್ಶನ ನೀಡಿದರು.

ಶ್ರೀ ಲಕ್ಷ್ಮೀಶ ಕಲಾ ಸಂಘದ ಅಧ್ಯಕ್ಷರಾದ ಶ್ರಿ ಎಸ್.ಹೆಚ್. ಹೂಗಾರ್, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಉಪಾಧ್ಯಕ್ಷರಾದ ಶ್ರೀಮತಿ ಚಂದ್ರಕಲಾ ನಾಯಕ್ ಸ್ವಾಗತಿಸಿದರು, ಶ್ರೀಮತಿ ನಳಿನಿ ಜಿ. ಚಂದ್ರಣ್ಣನವರು ಕಾರ್ಯಕ್ರಮ ನಿರೂಪಿಸಿದರೆ, ಶ್ರೀಮತಿ ಉಮಾ ಭಟ್ ವಂದಿಸಿದರು.

**ಶ್ರೀಮತಿ ಸುಜಾತ ಗೋಪಿನಾಥ**

ಕಾರ್ಯದರ್ಶಿ. ಶ್ರೀ ಲಕ್ಷ್ಮೀಶ ಕಲಾಸಂಘ, ಹರಿಹರ

# ತುಮಕೂರಿನಲ್ಲಿ ನೆರವೇರಿದ ಗಮಕ ಹಬ್ಬ –೨೦೧೮

ಗಮಕಭಾರತೀ ಚಾರಿಟಬಲ್ ಟ್ರಸ್ಟ್(ರಿ), ತುಮಕೂರು ಇವರು ಪ್ರತಿವರ್ಷದಂತೆ ಈ ವರ್ಷವೂ ಸಹ ಕರ್ನಾಟಕ ಗಮಕ ಕಲಾ ಪರಿಷತ್ತು(ರಿ), ಬೆಂಗಳೂರು, ಜಿಲ್ಲಾ ಗಮಕ ಕಲಾ ಪರಿಷತ್ತು, ತುಮಕೂರು ಹಾಗೂ ಸಂಸ್ಕಾರ ಭಾರತೀ ಕರ್ನಾಟಕ(ರಿ), ತುಮಕೂರು ಶಾಖೆಯ ಸಹಯೋಗದಲ್ಲಿ ದಿನಾಂಕ 14.7.2018 ರಿಂದ 22.7.2018ರ ವರೆಗೆ ತುಮಕೂರಿನ ಎಸ್. ಎಸ್. ಪುರಂನಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ದೇವಾಲಯದಲ್ಲಿ ಗಮಕಿ ಮೈ. ಶೇ. ಅನಂತಪದ್ಮನಾಭರಾವ್ ವಿರಚಿತ ಶ್ರೀ ಕೃಷ್ಣ ಚರಿತಾಮೃತ ಕಾವ್ಯದ ವಾಚನ ವ್ಯಾಖ್ಯಾನ ಕಾರ್ಯಕ್ರಮವನ್ನು 'ಗಮಕ ಹಬ್ಬ 2018' ಎಂಬ ಶೀರ್ಷಿಕೆಯಲ್ಲಿ ಆಚರಿಸಲಾಯಿತು. ವೇದಿಕೆಗೆ ತುಮಕೂರಿನ ಹಿರಿಯ ಗಮಕಿ ಕೀ॥ ಶೇ॥ ಬೇಲೂರು ವನಮಾಲಾ ಅವರ ಹೆಸರನ್ನಿಟ್ಟದ್ದು ಅನ್ವರ್ಥಕವಾಗಿತ್ತು.

ಮೊದಲನೇ ದಿನವಾದ ದಿ: 14.7.2018 ರಂದು ಗಮಕ ಹಬ್ಬ 2018ರ ಉದ್ಘಾಟನೆಯನ್ನು ಮುಖ್ಯ ಅತಿಥಿಗಳಾದ ಸಿದ್ಧಗಂಗಾಮಠದ ಅಧ್ಯಕ್ಷರಾದ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ನಡೆಸಿಕೊಟ್ಟರು. ತಮ್ಮ ಉದ್ಘಾಟನಾ ಭಾಷಣದಲ್ಲಿ ತುಮಕೂರಿನ ಗಮಕ ಚಟುವಟಿಕೆಗಳನ್ನು ಶ್ಲಾಘಿಸುತ್ತಾ ಸಜ್ಜನರ ನಗರ ತುಮಕೂರಿನಲ್ಲಿ ಗಮಕ ಭಾರತೀ ಚಾರಿಟಬಲ್ ಟ್ರಸ್ಟ್ ಸಾಹಿತ್ಯ, ಸಂಗೀತದಿಂದ ಕೂಡಿದ ಗಮಕ ಕಲೆಯ ಮೂಲಕ ಮಕ್ಕಳಲ್ಲಿ ಸಂಸ್ಕಾರದ ಬೀಜ ಬಿತ್ತುತ್ತಿರುವುದು ಶ್ಲಾಘನೀಯ ಎಂದರು. ಕನ್ನಡದ ಹಳೆಯ ಕಾವ್ಯಗಳನ್ನು ಉಳಿಸುವ ಹಾಗೂ ಇಂದಿನ ಯುವಪೀಳಿಗೆಗೆ ಪರಿಚಯಿಸುವ ನಿಟ್ಟಿನಲ್ಲಿ ಮತ್ತಷ್ಟು ಕಾರ್ಯ ನಡೆಯಬೇಕಿದೆ. ಎಲೆಮರೆಯ ಕಾಯಿಯಂತೆ ತಮ್ಮ ಶಿಷ್ಯಂದಿರಿಗೆ ಮಾರ್ಗದರ್ಶನ ನೀಡುವ ಮೂಲಕ ತುಮಕೂರಿನಲ್ಲಿ ಗಮಕದ ಉಳಿವು ಹಾಗೂ ಬೆಳವಣಿಗೆಗೆ ಕಾರಣಕರ್ತರಾಗಿರುವ ಗಮಕಿ ಶ್ರೀಮತಿ ತುಂಕೂರು ಸುನಂದಾ ಅವರ ಕಾರ್ಯವನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರಸಿದ್ಧ ಸಂಸ್ಕೃತ ವಿದ್ವಾಂಸರೂ ಹಾಗೂ ವಾಗ್ಮಿಗಳೂ ಆದಂತ ಶ್ರೀ ಡಾ॥ ಟಿ.ಎನ್. ಪ್ರಭಾಕರ್ ಅವರು ಮಾತನಾಡಿ ಆಷಾಢಮಾಸದ ಮೊದಲ ದಿನದಂದು ಸಾಂಸ್ಕೃತಿಕ ಚಟುವಟಿಕೆಗೆ ಚಾಲನೆ ನೀಡಿರುವುದು ಸಂತಸಕರ ಎಂದು ಹೇಳಿ, ಪ್ರತಿ ಮನೆಯಲ್ಲೂ ಸಹ ಸಂಧ್ಯಾಕಾಲದಲ್ಲಿ ಸಂಗೀತ, ಭಜನೆ, ಸ್ತೋತ್ರ, ಗಾಯನ, ಧ್ಯಾನದಲ್ಲಿ ತೊಡಗಿಸಿಕೊಳ್ಳುವ ಮುಖಾಂತರ ಭಾರತದ ಸಂಸ್ಕೃತಿಗೆ ತಮ್ಮ ಕೊಡುಗೆ ನೀಡಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದ ಇನ್ನೊಬ್ಬ ಅತಿಥಿಗಳಾದ ತುಮಕೂರಿನ ಕೆನರಾ ಬ್ಯಾಂಕ್ ಪ್ರಾಂತೀಯ ಕಾರ್ಯಾಲಯದ ಸಹಾಯಕ ನಿರ್ದೇಶಕರಾದ ಶ್ರೀ ಜಿ. ಬಸವರಾಜ್ ಅವರು ಮಾತನಾಡಿ ಗಮಕ ಕಲೆಯ ಬೆಳವಣಿಗೆಗೆ ಕೆನರಾ ಬ್ಯಾಂಕ್‌ನ ಸಹಾಯ ಹೀಗೆಯೇ ಮುಂದುವರೆಯುವುದಾಗಿ ಹೇಳಿದರು.

ಅಕ್ಷಯ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರಾಂಶುಪಾಲರಾದ ಶ್ರೀ ಶ್ರೀನಿವಾಸ್‌ರಾವ್ ಮಾತನಾಡಿ ಹಳೆಯ ಕಾವ್ಯಗಳನ್ನು ಇಂದಿನ ಜನತೆಗೆ ಪರಿಚಯಿಸುವ ಮೂಲಕ ಭಾರತೀಯ ಸಂಸ್ಕೃತಿಯ ಪರಿಚಯ ಮಾಡಿಕೊಡುತ್ತಿರುವ ಗಮಕಭಾರತೀ ಜೊತೆಯಲ್ಲಿ ತಾವು ಸದಾಕಾಲ ನಿಲ್ಲುವುದಾಗಿ ಹೇಳಿದರು.

ಇದೇ ಸಂದರ್ಭದಲ್ಲಿ ತುಮಕೂರಿನ ಪ್ರಸಿದ್ಧ ಗಮಕಿ ಶ್ರೀ ಎಂ ವಿ ಶ್ರೀಶೈಲಂ ಅವರಿಗೆ ಗಮಕ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಗುರುತಿಸಿ **'ಗಮಕ ಕಲಾಶ್ರೀ'** ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಗಮಕ ಹಬ್ಬದ ಮೊದಲನೇ ದಿನದ ಕಾರ್ಯಕ್ರಮವಾಗಿ ಶ್ರೀ ಮೈ.ಶೇ.ಅನಂತಪದ್ಮನಾಭರಾವ್ ವಿರಚಿತ 'ಶ್ರೀ ಕೃಷ್ಣ ಚರಿತಾಮೃತಮ್' ಕನ್ನಡ ಭಾಗವತದ 'ಕುವಲಯಾಪೀಡ ಸಂಹಾರ ಭಾಗವನ್ನು ಗಮಕಿ ಶ್ರೀಮತಿ ಸೀತಾಲಕ್ಷ್ಮೀಶರ್ಮ ವಾಚಿಸಿದರೆ ಗಮಕಿ ಶ್ರೀಮತಿ ಪ್ರಭಾವತಿ ಅವರು ವ್ಯಾಖ್ಯಾನಿಸಿದರು.

ಎರಡನೇ ದಿನ 'ಕಂಸವಧೆ' ಕಾವ್ಯ ಭಾಗದ ವಾಚನ ಮತ್ತೂರಿನ ಯುವ ಗಮಕಿ ಶ್ರೀ ಅಚ್ಯುತ್ ಅವಧಾನಿ ಅವರ ಸುಶ್ರಾವ್ಯ ಗಾಯನ ಹಾಗೂ ತುಮಕೂರಿನ ಯುವಪ್ರತಿಭೆ ಗಮಕಿ ಶ್ರೀ ಗುರುಪ್ರಸಾದ್ ಪಿ. ಅವರ ಪಾಂಡಿತ್ಯಪೂರ್ಣ ವ್ಯಾಖ್ಯಾನದಿಂದ ಸಂಪನ್ನವಾಯಿತು.

ಮೂರನೇ ದಿನ 'ಗುರುಕುಲ ಶಿಕ್ಷಣ' ಕಾವ್ಯ ಭಾಗದ ವಾಚನದಲ್ಲಿ ಬೆಂಗಳೂರಿನ ಗಮಕಿ ಶ್ರೀಮತಿ ಸಂಧ್ಯಾರಮೇಶ್ ಅವರು ಗಮನ ಸೆಳೆದರೆ, ಮೈಸೂರಿನ ಗಮಕಿ ಶ್ರೀಮತಿ ಜ್ಯೋತಿಶಂಕರ್ ಅಂದಿನ ಗುರುಕುಲ ಶಿಕ್ಷಣ ಪದ್ಧತಿಗೂ

ಇಂದಿನ ಶಿಕ್ಷಣ ಪದ್ಧತಿಗೂ ಇರುವ ಅಂತರವನ್ನು ಪೂರಕ ವಿಷಯಗಳೊಂದಿಗೆ ವಿವರಿಸಿ ಶ್ರೋತೃಗಳ ಮೆಚ್ಚುಗೆಗೆ ಪಾತ್ರವಾದರು.

ನಾಲ್ಕನೇ ದಿನ 'ಬಲರಾಮ ರೇವತಿ ಕಲ್ಯಾಣ' ಕಾವ್ಯ ಭಾಗವನ್ನು ಕಣ್ಣಿಗೆ ಕಟ್ಟುವ ಹಾಗೆ ಬೆಂಗಳೂರಿನ ಗಮಕಿ ಶ್ರೀಮತಿ ಮಂಜುಳಾ ಮರಾಠೆ ವಾಚಿಸಿದರೆ ತುಮಕೂರಿನ ಖ್ಯಾತ ವ್ಯಾಖ್ಯಾನಕಾರರಾದ ಡಾ॥ ಪಾವಗಡ ರೇಣುಕಾ ಪ್ರಸಾದ್ ಅವರು ವ್ಯಾಖ್ಯಾನ ಮಾಡಿದರು.

ಐದನೇ ದಿನ 'ಶ್ರೀ ಕೃಷ್ಣ ರುಕ್ಮಿಣಿ ವಿವಾಹ' ಕಾವ್ಯ ಭಾಗದಲ್ಲಿ ಪಾಲ್ಗೊಂಡ ಎಲ್ಲಾ ಶ್ರೋತೃಗಳೂ ಧನ್ಯತಾ ಭಾವದಲ್ಲಿ ಮಿಂದೆದ್ದರು.

ಆರನೇ ದಿನ 'ಸ್ಯಮಂತಕೋಪಾಖ್ಯಾನ' ಕಾವ್ಯ ಭಾಗವನ್ನು ತುಮಕೂರಿನ ಗಮಕಿ ಶ್ರೀಮತಿ ಶ್ರೀದೇವಿ ಅನಂತರಾಮು ಮಧುರವಾಗಿ ಭಾವತುಂಬಿ ವಾಚಿಸಿದರೆ,ಸಾಗರದ ಗಮಕಿ ಶ್ರೀಬಿ.ಟಿ.ಅರುಣ ಅವರ ಪಾಂಡಿತ್ಯಪೂರ್ಣವಾಗಿ ವ್ಯಾಖ್ಯಾನಿಸಿದರು.

ಏಳನೇ ದಿನ 'ಪಾರಿಜಾತಾಪಹರಣೆ' ಕಾವ್ಯ ಭಾಗವನ್ನು ವಾಚಿಸಿದವರು ತುಮಕೂರಿನ ಗಮಕಿ ಶ್ರೀಮತಿ ಎನ್. ಸಂಧ್ಯಾ ಅವರಾದರೆ ವ್ಯಾಖ್ಯಾನ ಮಾಡಿದವರು ಕೆಂಗೇರಿಯ ಗಮಕಿ ಶ್ರೀಮತಿ ಮೀರರವರು.

ಎಂಟನೇ ದಿನ 'ಕುಚೇಲೋಪಾಖ್ಯಾನ' ಕಾವ್ಯ ಭಾಗವನ್ನು ಬೆಂಗಳೂರಿನ ಎಂ.ಆರ್. ಸತ್ಯನಾರಾಯಣ ಅವರು ವಾಚಿಸಿದರೆ ತುಮಕೂರಿನ ಜನಪ್ರಿಯ ವ್ಯಾಖ್ಯಾನಕಾರರಾದ ಶ್ರೀ ಗ.ಸೀ. ಶ್ರೀನಿವಾಸಮೂರ್ತಿ ಅವರು ತಮ್ಮ ಎಂದಿನ ವಿಶಿಷ್ಟ ಶೈಲಿಯಲ್ಲಿ ಶ್ರೋತೃಗಳ ಮನಗೆದ್ದರು.

ಸಮಾರೋಪದ ದಿನವಾದ ಭಾನುವಾರ ದಿ: 22.7.2018ರಂದು 'ವಜ್ರನಿಗೆ ಪಟ್ಟಾಭಿಷೇಕ?' ಕಾವ್ಯಭಾಗವನ್ನು ತುಮಕೂರಿನ ಯುವಗಮಕಿಗಳಾದ ಕು॥ ಸುಪ್ರಿಯ ವಾಚನದಲ್ಲಿ ಹಾಗೂ ಕು॥ ಸುರಭಿ ವ್ಯಾಖ್ಯಾನದಲ್ಲಿ ತಮ್ಮ ಪ್ರೌಢಿಮೆಯನ್ನು ಮೆರೆದು ಭವಿಷ್ಯದಲ್ಲಿ ಉತ್ತಮ ಗಮಕಿಗಳಾಗುವ ಭರವಸೆ ಮೂಡಿಸಿದರು. ಸಂಸ್ಕಾರ ಭಾರತೀ ತುಮಕೂರು ಶಾಖೆಯ 'ಸಾಧಕರಿಗೆ ಸನ್ಮಾನ' ಕಾರ್ಯಕ್ರಮದಲ್ಲಿ ಕಲಾಸೇವೆಗಾಗಿ **ಅರಳಗುಪ್ಪೆಯ ಮೂಡಲಪಾಯ ಯಕ್ಷಗಾನ ಕಲಾವಿದರಾದ ಕಲ್ಲುಮನೆ ಭಾಗವತ್ ಶ್ರೀ ಎ.ಎಸ್. ನಂಜಪ್ಪ ಅವರನ್ನು** ಹಾಗೂ ಸಮಾಜಸೇವೆಗಾಗಿ **'ನೆಲೆ ದ್ವಾರಕ'ದ ಶ್ರೀಮತಿ ವಿಜಯಾರೆಡ್ಡಿ** ಅವರನ್ನು ಅನುಕ್ರಮವಾಗಿ **"ಯಕ್ಷಗಾನ ಕಲಾ ಕೇಸರಿ" ಹಾಗೂ "ನಿಸ್ವಾರ್ಥ ಸೇವಾ ತತ್ಪರೆ" ಎಂಬ ಬಿ**ರುದನ್ನಿತ್ತು ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ತುಮಕೂರಿನ ಸಂಸ್ಕಾರ ಭಾರತೀ ಅಧ್ಯಕ್ಷರಾದ ಶ್ರೀ ಆರ್.ಎಲ್. ರಮೇಶ್‌ಬಾಬು ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರಂಗಭೂಮಿ, ಕಿರುತೆರೆಯ ನಟ, ನಿರ್ದೇಶಕ, ಬರಹಗಾರರಾದ ಶ್ರೀ ಬಾಬು ಹಿರಣ್ಣಯ್ಯ ಅವರು ಮಾತನಾಡುತ್ತಾ ತಮ್ಮ ತಂದೆ ತಾತನವರಿಂದ ತಮಗಾದ ಗಮಕ ಕಲೆಯ ಪರಿಚಯವನ್ನು ನೆನೆಸಿಕೊಂಡರು. ತುಮಕೂರಿನೊಡನೆ ಅವರಿಗಿರುವ ನಂಟನ್ನು ಮೆಲುಕುಹಾಕಿದರು. ಒಟ್ಟಾರೆ ಗಮಕಭಾರತೀ ಚಾರಿಟಬಲ್ ಟ್ರಸ್ಟ್‌ನ ಕೆಲಸವನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ಇನ್ನೋರ್ವ ಅತಿಥಿಗಳಾದ ಎತ್ತಿನಹೊಳೆ ಯೋಜನೆ ಉಪವಿಭಾಗ-೨ ರ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರಾದ ಶ್ರೀ ಹೆಚ್.ಎಸ್. ಕೃಷ್ಣಪ್ರಸಾದ್ ಅವರು ಗಮಕದ ಕಾರ್ಯಕ್ರಮವನ್ನು ಬಹಳವಾಗಿ ಮೆಚ್ಚಿಕೊಂಡರು. ಸಂಸ್ಕಾರ ಭಾರತೀ, ಕರ್ನಾಟಕ ದಕ್ಷಿಣ ಪ್ರಾಂತದ ಸಹ ಕಾರ್ಯದರ್ಶಿ ಶ್ರೀ ರಾಮಚಂದ್ರ ಹಾಗೂ ಸಹ ಕೋಶಾಧ್ಯಕ್ಷರಾದ ಶ್ರೀ ಅನಂತರಾಮಯ್ಯ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದ ಕೊನೆಯಲ್ಲಿ ಸನ್ಮಾನಿತರಾದ ಕಲ್ಲುಮನೆ ಭಾಗವತ್ ಶ್ರೀ ಎ.ಎಸ್. ನಂಜಪ್ಪ ಅವರ ತಂಡದಿಂದ **'ದಕ್ಷಯಜ್ಞ'** ಎಂಬ ಯಕ್ಷಗಾನವನ್ನು ಏರ್ಪಡಿಸಲಾಗಿತ್ತು.

ಗಮಕ ಭಾರತೀ ಚಾರಿಟಬಲ್ ಟ್ರಸ್ಟ್‌ಗೆ ಪ್ರಾಯೋಜಕತ್ವ / ದತ್ತಿ ನಿಧಿ / ವಂತಿಗೆ / ಜಾಹೀರಾತು ನೀಡುವ ಮೂಲಕ ಗಮಕ ಕಾರ್ಯಕ್ರಮಗಳನ್ನು ಪೋಷಿಸುತ್ತಿರುವ ದಾನಿಗಳನ್ನು ಕೃತಜ್ಞತೆಯಿಂದ ಸ್ಮರಿಸಲಾಯಿತು.

ಪ್ರತಿದಿನದ ಕಾರ್ಯಕ್ರಮದ ಪ್ರಾರ್ಥನೆ, ನಿರೂಪಣೆಗಳನ್ನು ಗಮಕಿಗಳೂ ಹಾಗೂ ಗಮಕದ ವಿದ್ಯಾರ್ಥಿಗಳು ಬಹಳ ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಗಮಕ ಪರಿಷತ್ತಿನ ವಿವಿಧ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿವಿಧ ಗಮಕ ಪಾಠಶಾಲೆಯ ವಿದ್ಯಾರ್ಥಿಗಳಿಗೆ ಪ್ರತಿನಿತ್ಯ ಅರ್ಹತಾ ಪತ್ರಗಳನ್ನು ನೀಡಿ ಅಭಿನಂದಿಸಲಾಯಿತು.

**ವರದಿ: ಶ್ರೀಮತಿ ಕುಸುಮ ಅನಂತರಾಮಯ್ಯ**

# ಮೈಸೂರಿನಲ್ಲಿ "ಗಮಕಜ್ಯೋತಿ ಲಕ್ಷ್ಮೀಶಂಕರ" ಸಂಸ್ಮರಣ ಗ್ರಂಥ ಲೋಕಾರ್ಪಣೆ

ಮೈಸೂರು ನಗರದ ಸದ್ವಿದ್ಯಾ ಸಂಸ್ಥೆಯ ಶ್ರೀ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ಇದೇ ಮೇ ತಿಂಗಳ 27 ರಂದು ಗಮಕ ವಿದುಷಿ ಕಲಾಶ್ರೀ ವಿಜಯಮಾಲಾ ರಂಗನಾಥ್ ಅವರ ತಂದೆ ತಾಯಿಯವರನ್ನು ಕುರಿತಾದ "ಗಮಕಜ್ಯೋತಿ ಲಕ್ಷ್ಮೀಶಂಕರ" ಸಂಸ್ಮರಣ ಗ್ರಂಥವನ್ನು ಲೋಕಾರ್ಪಣೆ ಮಾಡಲಾಯಿತು. ನವನೀತ ಪ್ರಕಾಶನದ ವತಿಯಿಂದ ಮುದ್ರಿತವಾದ ಗ್ರಂಥವನ್ನು ಮೈಸೂರಿನ ಪ್ರಸಿದ್ಧ ಸಾಹಿತಿ, ಮನುಕುಲದ ಮಾತುಗಾರನೆಂದು ಹೆಸರಾದ ಡಾ॥ಮಳಲಿ ವಸಂತಕುಮಾರ್ ಬಿಡುಗಡೆ ಮಾಡಿದರು. ಡಾ॥ವಿಜಯಮಾಲಾ ರಂಗನಾಥ್ ಕನ್ನಡದ ಮಹತ್ವದ ಲೇಖಕಿ 30ಕ್ಕೂ ಹೆಚ್ಚು ವಿವಿಧ ಪ್ರಕಾರದ ಸಾಹಿತ್ಯ ಕುರಿತಾದ ಗ್ರಂಥಗಳನ್ನು ರಚಿಸಿದ್ದಾರೆ. ಅವರನ್ನು ಸಾಹಿತ್ಯ ಕ್ಷೇತ್ರ ಸರಿಯಾಗಿ ಗುರುತಿಸಿಲ್ಲ. ಪ್ರಸ್ತುತ ಕೃತಿ ರಚಿಸಿ ಲೇಖಕಿ ತಂದೆ ತಾಯಿಗಳ ಋಣ ತೀರಿಸಿದ್ದಾರೆ. ಅವರು 35 ವರ್ಷಗಳಿಂದ ಗಮಕ ವಿದುಷಿಯಾಗಿದ್ದಾರೆ. ಕೀರ್ತಿಶೇಷರಾದ ಗಮಕ ವಿದುಷಿ ಬಿ.ವೆಂಕಟಲಕ್ಷ್ಮಿ ಹಾಗೂ ಗಮಕಿ ಮತ್ತು ವ್ಯಾಖ್ಯಾನ ಕಲಾವಿದ ಶಂಕರಪ್ಪ ದಂಪತಿಗಳು ಗಮಕ ಕ್ಷೇತ್ರ ಹಾಗೂ ಸಮಾಜ ಸೇವಾ ಕ್ಷೇತ್ರದಲ್ಲಿ ಅವಿರತವಾಗಿ ಸಲ್ಲಿಸಿದ ಸೇವೆಯನ್ನು ಸ್ಮರಿಸಬೇಕಿದೆ. ಶಂಕರಪ್ಪ ಅವರದ್ದು ಗಮಕ ಕುಟುಂಬ. ಮನೆಯಲ್ಲಿ ಎಲ್ಲರೂ ಗಮಕಿಗಳೇ. ಮೊಮ್ಮಗ ನವನೀತ ಸಹ ರಾಜ್ಯ ಮಟ್ಟದ ಗಮಕ ಕಲಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿದ್ದಾನೆ. ಶ್ರೀಯುತರ ಮನೆಯಲ್ಲಿ ಗಮಕಿ ರಾಘವೇಂದ್ರರಾಯರಿಂದ ಆರಂಭಗೊಂಡ ಶ್ರೀ ಮಾರುತಿ ಗಮಕ ಶಾಲೆಯಲ್ಲಿ ಸತತವಾಗಿ 15 ವರ್ಷಗಳು ಗಮಕ ಪ್ರಚಾರ ನಡೆದು ನೂರಾರು ವಿದ್ಯಾರ್ಥಿಗಳು ಗಮಕ ಶಿಕ್ಷಣ ಪಡೆದುಕೊಂಡಿದ್ದಾರೆ. ಆ ಗಮಕ ಪ್ರಚಾರ ಡಾ॥ವಿಜಯಮಾಲಾ ಅವರಿಂದ ಮುನ್ನಡೆಯಲಿ. ಪೋಷಕರ ಹೆಸರಿನಲ್ಲಿ ಗಮಕ ಕೇಂದ್ರ ಇಂದಿನಿಂದಲೇ ಅಧಿಕೃತವಾಗಿ ಆರಂಭವಾಗಿದೆ ಎಂದು ಮಳಲಿ ವಸಂತಕುಮಾರ್ ಅವರು ವೇದಿಕೆಯ ಮೇಲಿನ ಎಲ್ಲಾ ಮುಖ್ಯಸ್ಥರಿಂದ ಒಪ್ಪಿಗೆ ಪಡೆದು ಪಟ್ಟಿಯನ್ನು ನೀಡಿದಾಗ ವಿಜಯಮಾಲಾ ಅನುಮೋದಿಸಿದರು.

ನಾಡಿನಲ್ಲಿ ಸಂಸ್ಕೃತ ಗ್ರಾಮವೆಂದೇ ಹೆಸರಾದ ಮತ್ತೂರಿನಿಂದ ಆಗಮಿಸಿದ್ದ ಗಮಕ ವಿದ್ವಾನ್ ಡಾ॥ ಸನತ್‌ಕುಮಾರ್ ಅವರು ಕುಮಾರವ್ಯಾಸ ಭಾರತದ ಪದ್ಯಗಳ ಸುಶ್ರಾವ್ಯವಾದ ಗಮಕ ವಾಚನದೊಂದಿಗೆ ಮಾತನಾಡಿ ಗಮಕ ಕೇಂದ್ರಕ್ಕೆ ಚಾಲನೆ ನೀಡಿದರು. ಡಾ॥ವಿಜಯಮಾಲಾ ಅವರನ್ನು ಅಭಿನಂದಿಸಿದರು.



ನಗರದ ಶ್ರೇಷ್ಠ ಸಾಹಿತಿ ಡಾ॥ಕೆ.ಅನಂತರಾಮು ಗ್ರಂಥದ ಕುರಿತು ಮಾತನಾಡಿ ಶಂಕರಪ್ಪ ಸರ್ ಕೆ.ಆರ್.ನಗರದಲ್ಲಿ ನನ್ನ ಗುರುಗಳಾಗಿದ್ದರು. ಹಿಂದಿ ಮೇಷ್ಟ್ರಾಗಿದ್ದ ಅವರು ವಿದ್ಯಾರ್ಥಿಗಳಿಗೆ ಬಹಳ ನೆಚ್ಚಿನ ಶಿಕ್ಷಕರಾಗಿದ್ದರು ಅವರಿಗೆ ಗಮಕವೆಂದರೆ ಪ್ರೀತಿ. ಅವರು ವರ್ಗವಾಗಿ ಊರೂರು ಮೇಲೆ ಸಾಹಿತ್ಯ ಹೊತ್ತು ತಿರುಗುತ್ತ ಜನರಿಗೆ ಸಾಹಿತ್ಯ ಮುಟ್ಟಿಸುವ ಕೆಲಸ ಮಾಡಿದ್ದಾರೆ. ಶಂಕರಪ್ಪನವರು ಸಿದ್ಧ ಪುರುಷರು. ಡಾ॥ ವಿಜಯಮಾಲಾ ಅವರು ತಮ್ಮ ತಂದೆ ಶಂಕರಪ್ಪನವರನ್ನು ಕುರಿತು ಸಮಗ್ರ ವಿಚಾರವನ್ನು ಗ್ರಂಥದಲ್ಲಿ ಜೋಡಣೆ ಮಾಡಿದ್ದಾರೆ. ಈ ಕೃತಿಯಲ್ಲಿ ಶಂಕರಪ್ಪನವರನ್ನು ಕುರಿತು ಬರೆದಿರುವ ಮೂವತ್ತಕ್ಕೂ ಹೆಚ್ಚು ಲೇಖನಗಳಿದ್ದು ಶ್ರೀಯುತರ ವಿವಿಧ ಮುಖಗಳನ್ನು ಪರಿಚಯಿಸುತ್ತವೆ. ಲೇಖಕಿ ಈಗಾಗಲೇ ತಮ್ಮ ತಂದೆಯವರ ಸಾಧನೆ ಸಿದ್ಧಿಗಳನ್ನು ಕುರಿತಂತೆ "ಮಹಿಮಾನ್ವಿತರು" ಮತ್ತು "ಮೌಲ್ಯವಂತ ಶಂಕರಪ್ಪ" ಎಂಬೆರಡು ಕೃತಿಗಳನ್ನು ಹೊರತಂದು ಅವರ ವ್ಯಕ್ತಿತ್ವ ಪರಿಮಳಿಸುವಂತೆ ಮಾಡಿದ್ದಾರೆ. ನಿಷ್ಠಾವಂತ ಹಿಂದಿ ಶಿಕ್ಷಕ, ಗಮಕಕಲಾಕೋವಿದ, ಗಾಂಧಿವಾದಿ, ಶಿಷ್ಯವತ್ಸಲ, ಸಂಸ್ಕೃತಿ ಪ್ರೇಮಿ, ಸ್ನೇಹಜೀವಿ, ಸ್ಥಿತಪ್ರಜ್ಞ, ಸಿದ್ಧಪುರುಷ,

ಚೈತನ್ಯಶೀಲ, ಅಜಾತಶತ್ರು, ಶಾಂತಮೂರ್ತಿ ಮುಂತಾದ ಸದ್ಗುಣಗಳಿಗೆ ಆಗರವಾಗಿದ್ದ ನನ್ನ ವಿದ್ಯಾಗುರು ಶಂಕರಪ್ಪನವರನ್ನು ನನ್ನ ಹೃದಯದಲ್ಲಿ ಸದಾ ಇಂಬಿಟ್ಟುಕೊಂಡು ನಮಿಸುತ್ತಿರುತ್ತೇನೆ. ವಿಜಯಮಾಲಾ ಗಮಕ ವಿಷಯದಲ್ಲಿಯೇ ಪಿಎಚ್.ಡಿ ಪದವಿಯನ್ನು ಪಡೆದ ಮೊದಲಿಗರು. ಶಂಕರಪ್ಪನವರ ಮೊಮ್ಮಗ ನವನೀತ್ ಬಿಳಿಗಿಯ ಲೇಖನ ಚೆನ್ನಾಗಿದೆ. ತನ್ನ ತಾತನ ಜೀವನ ಚರಿತ್ರೆ ಬರೆಯಬೇಕೆಂದು ಸಲಹೆ ನೀಡಿದರು.

ಹಿರಿಯ ಸಾಹಿತಿಗಳಾದ ಡಾ॥ಸಿ.ಪಿ.ಕೆ ಅವರು ಅಧ್ಯಕ್ಷತೆ ವಹಿಸಿದ್ದರು. ಡಾ॥ವಿಜಯಮಾಲಾ ನಾಡಿನ ಉತ್ತಮ ಮಹಿಳಾ ಸಾಹಿತಿ. ಕೃತಿಯಲ್ಲಿ ತಂದೆತಾಯಿಯವರು ಮಾಡಿದ ಸೇವೆಯ ಬಗ್ಗೆ ಬರೆದಿದ್ದಾರೆ. ಇದ್ದರೆ ವಿಜಯಮಾಲಾಳಂತಹ ಮಗಳಿರಬೇಕು ಎಂದು ಶ್ಲಾಘಿಸಿದರು. ಶಂಕರಪ್ಪನವರ ಅಳಿಯ ರಂಗನಾಥ ಬಿಳಿಗಿಯವರ ಕುರಿತಾದ ಸೇವೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸಮಾಜಸೇವಾ ದುರೀಣ ಡಾ॥ರಘುರಾಂ ವಾಜಪೇಯಿಯವರು ಶಂಕರಪ್ಪನವರ 23 ವರ್ಷಗಳ ಅವಿರತ ಸ್ಕಾಲರ್‌ಶಿಪ್ ಯಾತ್ರೆಯ ಹೆಜ್ಜೆಗುರುತುಗಳನ್ನು ವಿವರಿಸಿದರು. ಆ ಕಾರ್ಯಕ್ಕೆ ಮುಂದೆಯೂ ನಾವುಗಳು ಸಹಕರಿಸುತ್ತೇವೆ. ಡಾ॥ವಿಜಯಮಾಲಾ ಅವರು ತಂದೆಯವರು ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಸ್ಕಾಲರ್‌ಶಿಪ್ ಮುಂದುವರೆಸಲಿ ಎಂದು ಹೇಳಿದರು. ಗಮಕ ರತ್ನಾಕರ ಕೃ ರಾಮಚಂದ್ರ ಮಾತನಾಡಿ ತಮ್ಮ ಮತ್ತು ಶಂಕರಪ್ಪನವರ ನಡುವಿದ್ದ ಅನ್ಯೋನ್ಯತೆಯನ್ನು ತಿಳಿಸಿ ಅವರ ಶಿಸ್ತುಬದ್ಧ ಜೀವನವನ್ನು ಕೊಂಡಾಡಿದರು. ಗಮಕ ಕ್ಷೇತ್ರಕ್ಕೆ ತಮ್ಮ ಸಹಕಾರ ಎಂದಿಗೂ ಶಾಶ್ವತವಾಗಿರುವುದಾಗಿ ತಿಳಿಸಿದರು.

ಗಮಕ ಗ್ರಾಮದಿಂದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಗಮಕ ಸಂಪದ ಮಾಸ ಪತ್ರಿಕೆಯ ಹಿರಿಯ ಸಂಪಾದಕರಾದ ಶ್ರೀ ರಾಜಾರಾಮ ಮೂರ್ತಿಯವರು ಶಂಕರಪ್ಪನವರ ಸಾಧನೆಗಳನ್ನು ಶ್ಲಾಘಿಸಿದರು. ಲೇಖಕಿಯಾಗಿ ಮತ್ತು ಗಮಕಿಯಾಗಿ ಅವಿರತವಾಗಿ ಸೇವೆ ಸಲ್ಲಿಸುತ್ತಿರುವ ಡಾ॥ವಿಜಯಮಾಲಾ ರಂಗನಾಥ್ ಅವರಿಗೆ ಶುಭ ಕೋರಿದರು. ಈಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ॥ವೈ.ಡಿ.ರಾಜಣ್ಣ ಅವರು ಇಂದು ಬಿಡುಗಡೆಯಾದ ಕೃತಿಯಲ್ಲಿ ಸುಮಾರು ನೂರು ಪುಟದಷ್ಟು ಡಾ॥ವಿಜಯಮಾಲಾ ರಂಗನಾಥ್ ರವರು ಲೇಖನ ಬರೆದಿದ್ದಾರೆ. ಈಕೆ ಅತ್ಯಂತ ಉತ್ತಮ ಮಟ್ಟದ ಲೇಖಕಿ. ವಿವಿಧ ಪ್ರಕಾರದ ಎಲ್ಲ ಕೃತಿಗಳನ್ನು ನಾನು ಓದಿದ್ದೇನೆ. ಅವರ ಬರವಣಿಗೆಯ ಶೈಲಿ ಬಹಳ ಆಕರ್ಷಕವಾಗಿದೆ. ಅವರ ಸಾಹಿತ್ಯ ಕೃಷಿ ಇನ್ನೂ ಸಮೃದ್ಧವಾಗಲಿ ಎಂದು ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕಲಾಶ್ರೀ ನಾಗರತ್ನಮ್ಮ ಮುಂತಾದ ಗಣ್ಯರು ಉಪಸ್ಥಿತರಿದ್ದರು. ಕನ್ನಡ ಉಪನ್ಯಾಸಕ, ಗಮಕಕಲಾ ಪರಿಷತ್ತಿನ ಪತ್ರಿಕೆ ಗಮಕ ದುಂದುಭಿಯ ಸಂಪಾದಕ ಹಾಗೂ ವ್ಯಾಖ್ಯಾನ ಕಲಾವಿದ ಕೃ.ಪಾ.ಮಂಜುನಾಥ್ ಅಚ್ಚುಕಟ್ಟಾಗಿ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮದ ನಂತರ ಎಲ್ಲರಿಗೂ ಭೋಜನ ಕೂಟ ಏರ್ಪಡಿಸಲಾಗಿತ್ತು. ಆಗಮಿಸಿದ್ದ ಪ್ರತಿಯೊಬ್ಬ ಸಹೃದಯ ಶ್ರೋತೃವಿಗೂ ಅನಾವರಣಗೊಂಡ 364 ಪುಟಗಳ ಪ್ರತಿ "ಗಮಕಜ್ಯೋತಿ ಲಕ್ಷ್ಮಿಶಂಕರ" ಕೃತಿಯನ್ನು ಕೊಡುಗೆಯಾಗಿ ನೀಡಲಾಯಿತು.

ಸಿರಿಗನ್ನಡಂ ಗೆಲ್ಗೆ, ಗಮಕಕಲೆ ಬಾಳ್ಗೆ.

**ವರದಿ: ಡಾ॥ ವಿಜಯಮಾಲಾ ರಂಗನಾಥ್**

## ವಿಶೇಷ ಸಹಕಾರ

**ಕರ್ನಾಟಕ ಗಮಕ ಕಲಾ ಪರಿಷತ್ತು ಈಗ ಬಿ.ಎಂ.ಶ್ರೀ ಪ್ರತಿಷ್ಠಾನದ ಎರಡನೆಯ ಮಹಡಿಯಲ್ಲಿ ಕಛೇರಿ ಹೊಂದಿರುವ ವಿಷಯ ತಿಳಿದಿದೆಯಷ್ಟೇ. ಈ ಕಛೇರಿಯ ಆರು ತಿಂಗಳ ನಿರ್ವಹಣಾ ವೆಚ್ಚ ರೂ.24,000/- ರೂಗಳನ್ನು ನಾಡಿನ ಪ್ರಖ್ಯಾತ ವ್ಯಾಖ್ಯಾನ ಕೋವಿದ ಶ್ರೀಯುತ ಎ.ವಿ. ಪ್ರಸನ್ನರವರು ಉದಾರವಾಗಿ ನೀಡಿ ತಮ್ಮ ಗಮಕ ಕಲೆಯ ಬಗೆಗಿನ ಅಭಿಮಾನವನ್ನು ವ್ಯಕ್ತಪಡಿಸಿದ್ದಾರೆ. ಪರಿಷತ್ತು ಶ್ರೀಯುತರಿಗೆ ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.**

# ಕಾವ್ಯಾರ್ಥ ಚಿಂತನ



ಡಾ. ಎ.ವಿ. ಪ್ರಸನ್ನ
ಬೆಂಗಳೂರು

**ರನ್ನ ಕವಿಯ ಒಂದು ಪದ್ಯದಲ್ಲಿ....**

**ಗುರುವಂ ಲಘು ಸಂಧಾನದೆ ನರನಿಸೆ**
**ದ್ಗುರು ತಚ್ಛಂದೋವೃತ್ತಿಗೆ**
**ಗುರುಲಘುವಿಮಿಶ್ರಿತಂ ದೊರೆಕೊಳೆ ತ -**
**ದೊರೆಯೆನಿಸಿರ್ದುದು ಮನಕೆ ದುರ್ಯೋಧನನಾ**

-ಸಾಹಸಭೀಮ ವಿಜಯಂ : 4-49

ಮಹಾಭಾರತದ ಯುದ್ಧದ ಕಡೆಯ ದಿನ ರಣಭೂಮಿಯಲ್ಲಿ ಸಂಜಯನೊಂದಿಗಿರುವ ದುರ್ಯೋಧನ, ರಣದಲ್ಲಿ ಮಡಿದ ವೀರಾಧಿವೀರರ ಶವದರ್ಶನ ಮಾಡುತ್ತಾ ಬರುತ್ತಿರುವಾಗ ಎದುರಿನಲ್ಲಿ ದ್ರೋಣರ ಶವವನ್ನು ಕಂಡಾಗ ದುರ್ಯೋಧನನ ಮನಸ್ಸಿನಲ್ಲಿ ಉಂಟಾದ ಭಾವವನ್ನು, ರನ್ನ ಶ್ಲೇಷೆಯಲ್ಲಿ ವಿವರಿಸಿರುವ ರೀತಿಯಿದು. ಇಲ್ಲಿನ ಅರ್ಥದ ಸಮಸ್ಯೆಯೆಂದರೆ ಶ್ಲೇಷಾರ್ಥದ ಜೊತೆಗೆ 'ತದ್ಗುರು ತಚ್ಛಂದೋ ವೃತ್ತಿಗೆ ಸಮವೆನಿಸಿರ್ದುದು ಮನಕೆ ದುರ್ಯೋಧನನಾ'ಎಂಬುದರ ವಿವರಣೆ. ಇಲ್ಲಿ ಪ್ರಯೋಗವಾಗಿರುವ ಗುರುವಂ, ಲಘುಸಂಧಾನದೆ, ಗುರುಲಘು ವಿಮಿಶ್ರಿತಂ, ತಚ್ಛಂದೋವೃತ್ತಿಗೆ - ಎಂಬೀ ಶಬ್ದಗಳು, ಛಂದಶಾಸ್ತ್ರದ ಪಾರಿಭಾಷಿಕ ಶಬ್ದಗಳಾಗಿದ್ದು, ಅದನ್ನು ಯುದ್ಧದ ಸಂದರ್ಭಕ್ಕೆ ಅನ್ವಯಮಾಡುವಲ್ಲಿನ ತೊಡಕು ಸಹ ಇದೆ.

ಇದರ ಅರ್ಥವನ್ನು ಹೀಗೆ ಹೇಳಲು ಪ್ರಯತ್ನಿಸಬಹುದು. 'ಗುರುವಾದ ದ್ರೋಣರನ್ನು, ಲಘುಸಂಧಾನದಿಂದ ಎಂದರೆ ಕೀಳುಮಟ್ಟದ ಶರಸಂಧಾನದಿಂದ ನರನಿಸೆ ಅರ್ಜುನ ಹೊಡೆಯಲು (ಈ ಬಗ್ಗೆ ಭಾರತದ ಕಥೆಯಲ್ಲಿ ಪ್ರಸ್ತಾಪವಿಲ್ಲ. ಹಾಗೆ ಕೀಳುಟ್ಟದ ಯುದ್ಧ ಮಾಡಿ ದ್ರೋಣನಿಗೆ ಅಪಮಾನ ಮಾಡಿದವನು ಧೃಷ್ಟದ್ಯುಮ್ನ) ಅವನಿಗೆ ಗುರುಲಘು ವಿಮಿಶ್ರಿತವಾದ ಘನವಾದ ಮತ್ತು ಕ್ಷುದ್ರವಾದ ಪರಿಣಾಮಗಳು ಉಂಟಾದುವು ; ಕೌರವರ ಮಹಾ ಸೇನಾನಿಯಾದ ದ್ರೋಣನ ಮರಣವಾದುದು ಪಾಂಡವರಿಗಾದ ಗೆಲುವು. ಅದು ಗುರುವಾದ ಫಲ. ಆದರೆ ಕ್ಷುದ್ರವಾದ ರೀತಿಯಲ್ಲಿ ಪರಿಣಾಮಗಳು ಉಂಟಾದುವು ; ಕೌರವರ ಮಹಾ ಸೇನಾನಿಯಾದ ದ್ರೋಣನ ಮರಣವಾದುದು ಪಾಂಡವರಿಗಾದ ಗೆಲುವು. ಅದು ಗುರುವಾದ ಫಲ. ಆದರೆ ಕ್ಷುದ್ರವಾದ ರೀತಿಯಲ್ಲಿ ದ್ರೋಣನ ಮರಣಕ್ಕೆ ಕಾರಣವಾದುದು ಲಘು ಪರಿಣಾಮ. ಆಗಿನ ದ್ರೋಣನ ಸ್ಥಿತಿ, ಆ ಛಂದೋವೃತ್ತಿಗೆ ಸಮನಾಗಿತ್ತು. ಇಲ್ಲಿ ಅರ್ಥ ಸ್ಪಷ್ಟವಾಗುವುದಿಲ್ಲ. ಇಲ್ಲಿನ 'ಛಂದೋವೃತ್ತಿ' ಯಾವುದು? ಅದಕ್ಕೆ ಸಮನಾದ ದ್ರೋಣನ ಸ್ಥಿತಿ ಯಾವುದು ?

ಈ ಬಗ್ಗೆ ಒಂದು ಊಹೆಯನ್ನು ಮಾಡಬಹುದು. ಛಂದಸ್ಸಿನಲ್ಲಿ ವಿಷಮವಾದೊಂದು ಗಣವಿದೆ. ಅದನ್ನು ಮಧ್ಯ ಗುರುವಿನ ಗಣವೆಂದು ಕರೆಯುತ್ತಾರೆ. ಅಕ್ಷರ ಗಣದಲ್ಲಿ ಅದು 'ಜಗಣ' ಅದರ ರಚನೆ 'U-U' ಈ ರೀತಿಯಲ್ಲಿರುತ್ತದೆ. ಇದನ್ನು ವಿಶ್ಲೇಷಿಸಿದರೆ ಎರಡು ಲಘುಗಳ ನಡುವೆ ಒಂದು ಗುರು ಇರುವುದೆಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ದ್ರೋಣನ ಸ್ಥಿತಿ ಇಬ್ಬರು ಲಘುಗಳ (ಅಲ್ಪರ) ನಡುವೆ ಎಂದರೆ ಅರ್ಜುನ -ಧೃಷ್ಟದ್ಯುಮ್ನರ ನಡುವೆ ಒಬ್ಬರು ಗುರು ಸಿಕ್ಕಿಕೊಂಡಿರುವುದು ಎಂಬಂತಿದೆಯೆಂದು ದುರ್ಯೋಧನನ ಮನಸ್ಸಿಗೆ ಅನ್ನಿಸಿತು ಅಥವಾ ದ್ರೋಣರ ಶವದ ಅಕ್ಕಪಕ್ಕಗಳಲ್ಲಿ ನಿಂತ ತಾನು ಮತ್ತು ಸಂಜಯರೇ ಲಘುಗಳೆಂದೂ ದ್ರೋಣಾಚಾರ್ಯರೇ ಮಧ್ಯದಲ್ಲಿರುವ 'ಗುರು'ವೆಂದೂ ಧುರ್ಯೋಧನನಿಗೆ ಅನ್ನಿಸಿರಬಹುದೆ? ಇದು ನನ್ನ ಊಹೆಯ ಅರ್ಥ.

# ಕ.ಸಾ.ಪ. ನಡೆಯ ಬಗ್ಗೆ ವ್ಯಾಪಕ ವಿರೋಧ

## ಗಮಕದೆಡೆಗೆ ದಿವ್ಯ ನಿರ್ಲಕ್ಷ್ಯ ಎಷ್ಟು ಸರಿ ?

ಕಾವ್ಯಗಳನ್ನು ಒಂದಲ್ಲ ಒಂದೆಡೆ ಅಮೂಲಾಗ್ರವಾಗಿ ಎಡಬಿಡದೆ ನಾಡಿನಾದ್ಯಂತ ವಾಚಿಸುತ್ತ ವಾಚನಕ್ಕೆ ಅಳವಡಿಸುತ್ತ ವಿಸ್ತೃತವ್ಯಾಖ್ಯಾನಗಳ ಮೂಲಕ ಕೇವಲ ನಾಡಿನಲ್ಲಲ್ಲದೆ ಅಂತರ ರಾಜ್ಯ, ಅಂತಾರಾಷ್ಟ್ರೀಯವಾಗಿಯೂ ನಿರಂತರವಾಗಿ ಪಸರಿಸತ್ತ ಬಂದಿರುವ ಹೆಮ್ಮೆ ಕರ್ನಾಟಕ ಗಮಕಕಲಾ ಪರಿಷತ್‌ಗೆ ಸಹಜವಾಗಿ ಇದೆ. ಸಾಹಿತ್ಯ ಕುರಿತು ಮಾತನಾಡುವ ದಿಗ್ಗಜರೂ ಕೂಡ ಕವಿ, ಗಮಕಿ, ವಾದಿ, ವಾಗ್ಮಿ ಎಂಬ ಸಾಹಿತ್ಯಚತುರ್ಮುಖರನ್ನು ಉಲ್ಲೇಖಿಸುವ ಸಂದರ್ಭದಲ್ಲಿ ಗಮಕಿಗೆ ದ್ವಿತೀಯ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದಾರೆ. ಗಮಕ ಕಲೆ ಮತ್ತು ಅದನ್ನು ಆರಾಧಿಸುವ ಗಮಕಿ ಜತೆಗೂಡುವ ಕಾವ್ಯಾಧ್ಯಾಯಿ ವ್ಯಾಖ್ಯಾನಕಾರ ಎಲ್ಲರೂ ಹಳಗನ್ನಡ ಕಾವ್ಯಗಳನ್ನು ಸ್ವಯಂ ಆಸ್ವಾದಿಸುತ್ತ ತಾವು ಅರ್ಥೈಸಿಕೊಂಡ. ಕಂಡುಂಡ ಸವಿಯನ್ನು  ಎಲ್ಲರೊಡನೆ ಹಂಚಿಕೊಳ್ಳುತ್ತಲೇ ಬಂದಿದ್ದಾರೆ. ಸಾಹಿತ್ಯ ಪರಿಷತ್ ಉಗಮಕ್ಕೆ ಮೊದಲೂ ಸಹ ನಮ್ಮ ಗ್ರಾಮೀಣ ಜನ ತಮ್ಮ ಊರ ಅರಳೀಕಟ್ಟೆಗಳ ಮೇಲೆ ವಾಚನದ ಮೂಲಕ ತಮ್ಮ ಸ್ಮೃತಿ ಸಾಮರ್ಥ್ಯವನ್ನು ಪ್ರದರ್ಶಿಸುತ್ತಿದ್ದುದು ಎಲ್ಲೆಡೆ ಉಲ್ಲೇಖವಾಗಿದೆ. ಇಂತಹ ಕಲೆಗೆ ಬೆನ್ನುಲುಬಾಗಿ ನಿಂತು ಇಂದು ಸಾಹಿತ್ಯ ಸೇವೆಯನ್ನು ಮಾಡುತ್ತಿರುವುದು ಕರ್ನಾಟಕ ಗಮಕಕಲಾ ಪರಿಷತ್ ವಿದ್ಯಾರ್ಥಿಗಳಿಗೂ ಸಹ ಶಾಲೆ -ಕಾಲೇಜುಗಳಿಗೆ ಹೋಗಿ ಅವರ ಪಠ್ಯಾಂತರ್ಗತ ಹಳಗನ್ನಡ ಕಾವ್ಯಗಳನ್ನು ವಾಚನ ವಿವರಣೆಯ ಮೂಲಕ ಅರ್ಥೈಸುವ ಕೆಲಸವನ್ನು ಮಾಡುತ್ತಿರುವವರು ಕೇವಲ ಗಮಕಿಗಳು ಮಾತ್ರ ಎಂದು ಸದೃಢವಾಗಿ ಹೇಳುತ್ತೇವೆ.

ಅಖಿಲ ಭಾರತ ಪ್ರಥಮ ಹಳಗನ್ನಡ ಸಾಹಿತ್ಯ ಸಮ್ಮೇಳನ ಆಯೋಜಿತವಾಗುತ್ತಿರುವುದನ್ನು ತಿಳಿದು ಸಂತಸಪಟ್ಟ ಕರ್ನಾಟಕ ಗಮಕಕಲಾ ಪರಿಷತ್, ಸಮ್ಮೇಳನದಲ್ಲಿ ಗಮಕ ವಾಚನದ ಮೂಲಕ ಕಾವ್ಯದ ಸೊಗಡನ್ನು ಶ್ರೋತೃಗಳಿಗೆ ತಲುಪಿಸಲು ಬಯಸಿ ಕಾರ್ಯಕ್ರಮವೊಂದನ್ನು ಸೇರ್ಪಡೆ ಮಾಡುವ ಅವಕಾಶ ಕಲ್ಪಿಸಲು ಕೇಂದ್ರ ಕಾರ್ಯಾಲಯದಿಂದ ಮನವಿ ಮಾಡಿದಾಗ ಸಾಹಿತ್ಯ ಪರಿಷತ್‌ನಿಂದ ಉದ್ಧಟತನದ ಪ್ರತಿಕ್ರಿಯೆ ವ್ಯಕ್ತವಾಗಿದೆ. ನಮ್ಮ ಹಾಸನ ಜಿಲ್ಲಾ  ಸಾಹಿತ್ಯ ಪರಿಷತ್ ಅಧ್ಯಕ್ಷರಿಗೆ ಮನವಿ ಸಲ್ಲಿಸಿತ್ತು. ಆದರೆ ಯಾವುದೇ ಪುರಸ್ಕಾರ ಸಿಗಲಿಲ್ಲ.

ಅದಂತಿರಲಿ, ಸಾಹಿತ್ಯ ಸೇವೆಗೇ ಇರುವ ಸಹವರ್ತಿ ಸಂಸ್ಥೆ ಎಂಬ ಅಭಿಮಾನವೂ ಸಾಹಿತ್ಯ ಪರಿಷತ್‌ಗೆ ಇದ್ದಂತಿಲ್ಲ. ಕರ್ನಾಟಕ ಗಮಕ ಕಲಾ ಪರಿಷತ್‌ನ ಅಧ್ಯಕ್ಷರಿಗಾಗಲಿ, ಜಿಲ್ಲಾಧ್ಯಕ್ಷನಾದ ನನಗಾಗಲಿ ಆಹ್ವಾನ ಮಾಡದಾಗ್ಯೂ ಸಹ ಕನ್ನಡದ್ದೇ ಆದ ಗಮಕ ಕಲೆ,  ಗಮಕಿಗಳಿಗೆ ಸಾಹಿತ್ಯ ಪರಿಷತ್ ತೋರಿಸಿರುವ ನಿರ್ಲಕ್ಷ್ಯ ಇದಾಗಿದೆ. ಯಾವುದೇ ರಾಜಕೀಯದ ಸೋಂಕಿಲ್ಲದೆ ಸಾಹಿತ್ಯ ಪ್ರಸರಣಕ್ಕಾಗಿಯೇ ಕಟಿಬದ್ಧನಾಗಿ ಕೆಲಸ ಮಾಡುತ್ತಿರುವ ಸಂಸ್ಥೆಯ ಗಮಕಿಗಳು -ವ್ಯಾಖ್ಯಾನಕಾರರನ್ನು ಪ್ರಸಕ್ತ ಹಳಗನ್ನಡ ಸಾಹಿತ್ಯ ಸಮ್ಮೇಳನದ  ಸಂದರ್ಭದಲ್ಲಿ ಉಪೇಕ್ಷಿಸಿರುವುದು ಅತ್ಯಂತ ವಿಷಾದನೀಯ ಸಂಗತಿಯಾಗಿದೆ.

ಸಾಹಿತ್ಯಕ್ಕೆ ಶ್ರದ್ಧಾಯಕ್ತ ಸೇವೆ ಸಲ್ಲಿಸುತ್ತಿರುವ ಗಮಕಕಲೆ, ಗಮಕ ಕಲಾ ಪರಿಷತ್, ಗಮಕಿ, ವ್ಯಾಖ್ಯಾನಕಾರ ಇವರೆಲ್ಲರಿಗೂ ಮಾಡಿದ ಈ ಅವಮಾನವನ್ನು ನಾವೆಲ್ಲರೂ ಖಂಡಿಸುತ್ತೇವೆ.

**ಕಲಾಶ್ರೀ ಗಣೇಶ ಉಡುಪ**

ಅಧ್ಯಕ್ಷ, ಹಾಸನ ಜಿಲ್ಲಾ ಗಮಕಕಲಾ ಪರಿಷತ್

## ವಿಷಾದದ ಸಂಗತಿಯೇ ಸರಿ.....!

ಇದೇ ಜೂನ್ -2018ಕೊನೆಯ ವಾರದಲ್ಲಿ ಶ್ರವಣಬೆಳಗೊಳದಲ್ಲಿ 'ಹಳಗನ್ನಡ'ಸಾಹಿತ್ಯ ಸಮ್ಮೇಳನ ನಡೆಸಿದ್ದು ಸಂತಸದ ವಿಷಯ. ಈ ಸಮ್ಮೇಳನಕ್ಕೆ ಕನ್ನಡ ಸಾಹಿತ್ಯ ಪರಿಷತ್ತು, ಯಾವುದೇ ಗಮಕಿಗಳನ್ನು -ವಿಚಾರ ಸಂಕಿರಣ, ಸುದ್ದಿಗೋಷ್ಠಿಗಳಲ್ಲಿ ಭಾಗವಹಿಸಲು -ಆಹ್ವಾನಿಸದಿರುವುದು ನಿರಾಸೆ ಹಾಗೂ ವಿಷಾದ ಮೂಡಿಸಿತು. ಗಮಕ ಕ್ಷೇತ್ರದಲ್ಲಿ ದಿಗ್ಗಜರಾದ ಪಂಡಿತರಿದ್ದು, ಕ.ಸಾ.ಪ. ಅವರನ್ನು ನಿರ್ಲಕ್ಷಿಸಿರುವುದು ಸರಿಯಲ್ಲ. ಹಳಗನ್ನಡ, ನಡುಗನ್ನಡ ಕಾವ್ಯಗಲು ಜೀವಂತವಾಗಿರುವುದು ಗಮಕಿಗಳಿಂದಲೇ ಹೊರತು,ಸಂಶೋಧಕರಿಂದಲ್ಲ. ಮೂರು ವರ್ಷಗಳ ಅವಧಿಯನ್ನು ಐದು ವರ್ಷಗಳವರೆಗೆ ವಿಸ್ತರಿಸಿಕೊಂಡ ಕ.ಸಾ.ಪ. ಪ್ರಜಾಪ್ರಭುತ್ವದ ತತ್ತ್ವಗಳನ್ನು ಗಾಳಿಗೆ ತೂರಿದೆ. ಗಮಕ ಕ್ಷೇತ್ರದ ಮಹಾನ್ ವ್ಯಾಖ್ಯಾನಕಾರರು ಹಾಗೂ ವಾಚಕರನ್ನು ಕ.ಸಾ.ಪ. ಆಹ್ವಾನಿಸಲಿ ಎಂದು ಗಮಕಾಭಿಮಾನಿಗಳ ಪರವಾಗಿ ಪ್ರಾರ್ಥಿಸುವೆ.

**- ಕಲ್ಯಾಣರಾವ್ ದೇಶಪಾಂಡೆ,**  ವಿಜಯಪುರ

*ಕನ್ನಡ ಕಾವ್ಯ ಉಳಿಸಿ...* *ಗಮಕ ಕಲೆ ಬೆಳೆಸಿ...*

**ಕರ್ನಾಟಕ ಗಮಕ ಕಲಾ ಪರಿಷತ್ತು (ರಿ.), ಬೆಂಗಳೂರು**
**ಕೇರಳ ಗಡಿನಾಡ ಘಟಕ, ಕಾಸರಗೋಡು – 671 121**
ಮತ್ತು
**ಸಿರಿಗನ್ನಡ ವೇದಿಕೆ (ರಿ.) ಬೆಂಗಳೂರು**
**ಕೇರಳ ಗಡಿನಾಡ ಘಟಕ, ಕಾಸರಗೋಡು – 671 121**
*ಇವುಗಳ ಸಂಯುಕ್ತ ಆಶ್ರಯದಲ್ಲಿ*

# ಗಮಕ ಶ್ರಾವಣದ ದಶಮಾನೋತ್ಸವ

ಮಾನ್ಯರೇ, ತಾ. 21-07-2018

ಆದಿ ಗಮಕಿಗಳಾದ ಕುಶ–ಲವರ ಜನ್ಮಮಾಸ 'ಶ್ರಾವಣ'ವನ್ನು ಕಳೆದ ಒಂಭತ್ತು ವರ್ಷಗಳಿಂದ ಗಮಕ ಶ್ರಾವಣವಾಗಿ (ಗಮಕ ಮಾಸಾಚರಣೆ) ಆಚರಿಸುತ್ತಾ ಬಂದಿದ್ದೇವೆ. ಪ್ರಕೃತ ಹತ್ತನೇ ವರ್ಷದಲ್ಲಿ ಆಗೋಸ್ತು ತಿಂಗಳ 25 ಮತ್ತು 26 (ಶನಿವಾರ ಮತ್ತು ಆದಿತ್ಯವಾರ)ರಂದು ಎರಡು ದಿನಗಳ ಗಮಕ ತರಬೇತಿ ಶಿಬಿರವನ್ನು ವ್ಯವಸ್ಥೆಗೊಳಿಸುವುದರೊಂದಿಗೆ ದಶಮಾನೋತ್ಸವವನ್ನು ಕಾಸರಗೋಡಿನ ಹವ್ಯಕ ಸಭಾಭವನದಲ್ಲಿ ಆಯೋಜಿಸಲಾಗಿದೆ.

ಸಂಪನ್ಮೂಲ ವ್ಯಕ್ತಿಗಳಾಗಿ **ಹಿರಿಯ ಗಮಕಿ ಕಲಾಶ್ರೀ ತೆಕ್ಕೇಕೆರೆ ಸುಬ್ರಹ್ಮಣ್ಯ ಭಟ್ಟ, ಬೆಂಗಳೂರು** ಮತ್ತು **ಉಂಡೆಮನೆ ಶ್ರೀ ವಿಶ್ವೇಶ್ವರ ಭಟ್ಟರು** ಭಾಗವಹಿಸಲಿದ್ದಾರೆ. ಶಿಬಿರದ ಉದ್ಘಾಟನೆಯನ್ನು ಖ್ಯಾತ ಯಕ್ಷಗಾನ ಅರ್ಥಧಾರಿ **ಶ್ರೀ ಬೆಳ್ಳಿಗೆ ನಾರಾಯಣ ಮಣಿಯಾಣಿ**ಯವರು ನೆರವೇರಿಸಲಿರುವರು. ಹವ್ಯಕ ಸಭಾದ ಅಧ್ಯಕ್ಷ ಹಾಗೂ ಹಿರಿಯ ಅರಿವಳಿಕೆ ತಜ್ಞ **ಡಾ| ವೆಂಕಟಗಿರಿ** ಅವರು ಶುಭಾಶಂಸನೆಗೈಯಲಿರುವರು.

## ಕಾರ್ಯಕ್ರಮದ ವಿವರ

| ದಿನಾಂಕ | ಸಮಯ | ಸ್ಥಳ | ಭಾಗವಹಿಸುವ ಕಲಾವಿದರು |
|---|---|---|---|
| **12-08-2018** ಆದಿತ್ಯವಾರ | ಅಪರಾಹ್ನ **2.30ಕ್ಕೆ** | ಶ್ರೀನಿಧಿ ಕುಳಮರ್ವ ನಾರಾಯಣ ಮಂಗಲ, ಕುಂಬಳೆ | ಗಮಕ ಶ್ರಾವಣದ ಉದ್ಘಾಟನೆ **ಡಾ. ಹರಿಕೃಷ್ಣ ಭಟ್, ಭರಣ್ಯ**<br>ದೀಪಪ್ರಜ್ವಲನೆ : **ಶ್ರೀಮತಿ ಲಲಿತಾ ಲಕ್ಷ್ಮೀ ಕುಳಮರ್ವ**<br>ಅಧ್ಯಕ್ಷರು : **ಶ್ರೀ ಟಿ. ಶಂಕರನಾರಾಯಣ ಭಟ್**<br>ವಾಚನ : **ಶ್ರೀಮತಿ ದಿವ್ಯಾ ಕಾರಂತ**, ಮಂಗಲ್ಪಾಡಿ<br>ವ್ಯಾಖ್ಯಾನ : **ಶ್ರೀಮತಿ ಕೆ. ಜಯಲಕ್ಷ್ಮಿ ಕಾರಂತ**, ಮಂಗಲ್ಪಾಡಿ<br>ಪ್ರಾಯೋಜಕತ್ವ : **ವಿ.ಬಿ. ಕುಳಮರ್ವ**, ಅಧ್ಯಕ್ಷರು, ಸಿರಿಗನ್ನಡ ವೇದಿಕೆ (ರಿ.) ಕೇರಳ ಗಡಿನಾಡ ಘಟಕ, ಕಾಸರಗೋಡು |
| **20-08-2018** ಸೋಮವಾರ | ಪೂರ್ವಾಹ್ನ **10.00ಕ್ಕೆ** | ಮುಳಿಯಾರು ಶ್ರೀ ಸುಬ್ರಹ್ಮಣ್ಯ ಸ್ವಾಮಿ ಕ್ಷೇತ್ರದಲ್ಲಿ | ದೀಪಪ್ರಜ್ವಲನೆ : **ಶ್ರೀ ಸೀತಾರಾಮ ಬಳ್ಳುಳ್ಳಾಯ**<br>ವಾಚನ : **ಶ್ರೀ ಪಿ.ವಿ. ಶಿವರಾಮ ಚೆತ್ತಾರಿ**<br>ವ್ಯಾಖ್ಯಾನ : **ಶ್ರೀ ವಿ.ಬಿ. ಕುಳಮರ್ವ** |
| **24-08-2018** ಶುಕ್ರವಾರ | ಅಪರಾಹ್ನ **2.30ಕ್ಕೆ** | ಹವ್ಯಕ ಸಭಾ ಭವನ ಕಾಸರಗೋಡು | ದೀಪಪ್ರಜ್ವಲನೆ : **ಶ್ರೀ ರಮೇಶ್ ಭಟ್ ವೈ.ವಿ.**<br>ವಾಚನ : **ಕು| ಮೇಧಾ ಭಟ್ ನಾಯರ್ಪಳ್ಳ**<br>ವ್ಯಾಖ್ಯಾನ : **ಗಮಕ ಕಲಾಧರೆ ಕು| ಶ್ರದ್ಧಾ ಭಟ್**, ನಾಯರ್ಪಳ್ಳ<br>ಪ್ರಾಯೋಜಕತ್ವ : **ಹವ್ಯಕ ವಲಯ**, ಕಾಸರಗೋಡು<br>ಶ್ರೀ ವರಮಹಾಲಕ್ಷ್ಮೀ ಪೂಜಾ ಸಂದರ್ಭದಲ್ಲಿ |

**ದಿನಾಂಕ 25-8-2018 ಶನಿವಾರ, ಹವ್ಯಕ ಭವನ**

ಪೂರ್ವಾಹ್ನ 9.00ರಿಂದ : **ಶಿಬಿರಾರ್ಥಿಗಳ ನೋಂದಾವಣೆ**
10.00ಕ್ಕೆ ಉದ್ಘಾಟನೆ : **ಶ್ರೀ ಬೆಳ್ಳಿಗೆ ನಾರಾಯಣ ಮಣಿಯಾಣಿ**
ಅಧ್ಯಕ್ಷತೆ : **ಟಿ. ಶಂಕರನಾರಾಯಣ ಭಟ್**
10.30ರಿಂದ : **ಶಿಬಿರ ಪ್ರಾರಂಭ**

**ದಿನಾಂಕ 26-08-2018 ಆದಿತ್ಯವಾರ**

ಬೆಳಗ್ಗೆ 9.30ರಿಂದ : **ಶಿಬಿರದ ಮುಂದುವರಿಕೆ**
11.30ರಿಂದ : **ಸಾಹಿತ್ಯ ರಚನೆಯ ಕುರಿತು – ಶ್ರೀ ವಿ.ಬಿ. ಕುಳಮರ್ವ**
**ಕಲಾಶ್ರೀ ಗಮಕಿ ತೆಕ್ಕೇಕೆರೆ ಶ್ರೀ ಸುಬ್ರಹ್ಮಣ್ಯ ಭಟ್ ಅವರಿಂದ**
ಶ್ರೀ ರಾಮ ಚರಿತ ಮಾನಸ ಕೃತಿಯ ಆಯ್ದ ಭಾಗದ ವಾಚನ
ಅಪರಾಹ್ನ 3.00ರಿಂದ : **ಸಮಾರೋಪ**

**ಹಿರಿಯ ಸಾಹಿತಿ ಡಾ| ಯು. ಮಹೇಶ್ವರಿ ಅವರಿಂದ ಶಿಬಿರದ ಅವಲೋಕನ**

**ಸನ್ಮಾನ : ಹಿರಿಯ ಸಾಹಿತಿ ಶ್ರೀ ಯನ್. ತಿಮ್ಮಣ್ಣ ಭಟ್ ನೆತ್ತರಗುಳಿ, ಬಾಯಾರು; ಬಾಲಪ್ರತಿಭೆ ಕು| ಮೇಧಾ ಭಟ್ ನಾಯರ್ಪಳ್ಳ**

***ಮೇಲಿನ ಸಮಾರಂಭದಲ್ಲಿ ಕಲಾಭಿಮಾನಿಗಳಾದ ತಾವೆಲ್ಲರೂ ಭಾಗವಹಿಸಿ 'ಗಮಕ ಶ್ರಾವಣ'ವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.***

| | | | |
|---|---|---|---|
| **ಕಲಾಶ್ರೀ ಗಂಗಮ್ಮ ಕೇಶವಮೂರ್ತಿ**<br>ಅಧ್ಯಕ್ಷರು<br>ಕರ್ನಾಟಕ ಗಮಕ ಕಲಾ ಪರಿಷತ್ತು (ರಿ.)<br>ಬೆಂಗಳೂರು<br>(08884672716) | **ವಿ.ಬಿ. ಕುಳಮರ್ವ**<br>ಅಧ್ಯಕ್ಷರು<br>ಸಿರಿಗನ್ನಡ ವೇದಿಕೆ (ರಿ.)<br>ಕಾಸರಗೋಡು ಗಡಿನಾಡ ಘಟಕ<br>(09446484585) | **ಎಸ್.ಜಿ. ಪ್ರಸಾದ್**<br>ಕೋಶಾಧಿಕಾರಿ<br>(09447440329) | **ತೆಕ್ಕೇಕೆರೆ ಶಂಕರನಾರಾಯಣ ಭಟ್**<br>ಅಧ್ಯಕ್ಷರು<br>ಕರ್ನಾಟಕ ಗಮಕ ಕಲಾ ಪರಿಷತ್ತು (ರಿ.)<br>ಕೇರಳ ಗಡಿನಾಡ ಘಟಕ, ಕಾಸರಗೋಡು<br>(09746631456) |

**ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು**

*ಸಿರಿಗನ್ನಡ ಗೆಲ್ಲಲಿ....* *ಗಮಕ ಕಲೆ ಬಾಳಲಿ....*

# ಜಿಲ್ಲಾ ವರದಿಗಳು

## ಕೊಪ್ಪಳ ಜಿಲ್ಲಾ ವರದಿ

ದಿನಾಂಕ:29-04-2018 ರವಿವಾರ ಗ್ರಾಮದ ಅಳ್ಳಿಬೆಂಚಿ ಶ್ರೀ ಉಡುರಾಜಮುಖಿ ದೇವಸ್ಥಾನದಲ್ಲಿ ನಮ್ಮೂರ 199ನೇ ಮಾಸಿಕ ಶಿವಾನುಭವ ಕಾರ್ಯಕ್ರಮದಲ್ಲಿ ಡಾ॥ ಫಕೀರಪ್ಪ ವಜ್ರಬಂಡಿ ಹರಿಶ್ಚಂದ್ರ ಕಾವ್ಯದ ಐದು ಪದ್ಯಗಳ ಗಮಕ ವಾಚನ ಮಾಡಿ ನಂತರ ವ್ಯಾಖ್ಯಾನ ಮಾಡಿದ ಶೈಲಿ ತುಂಬಾ ಆಕರ್ಷಕವಾಗಿತ್ತು. ಮುಖ್ಯ ಅತಿಥಿಗಳಾಗಿ ಸಿದ್ಧಲಿಂಗನಗೌಡ ಸೋಮನಗೌಡ ಪಿಡ್ಡನಗೌತ್ರ, ಜಗದೀಶ ಮುದಕಪ್ಪ ಬಾರಕೇರ, ಶರಣಪ್ಪ ಬಳ್ಳೊಳ್ಳಿ, ವೀರಭದ್ರಪ್ಪ ಮನ್ವಾಚಾರಿ, ಶರಣಪ್ಪ ಬ್ಯಾಳಿ, ಮುಂತಾದವರು ಪಾಲ್ಗೊಂಡಿದ್ದರು. ಗಮಕ ಕಲಾ ಪರಿಷತ್ತಿನ ಜಿಲ್ಲಾ ಖಜಾಂಚಿ ಮಲಿಕ್‌ಸಾಬ ಹುಸೇನ್‌ಭಾಷಾ ಸಂಯೋಜಿಸಿದರು ಕಾರ್ಯಕ್ರಮಕ್ಕೆ ಬಸವರಾಜ ನರೇಗಲ್ ಸ್ವಾಗತಿಸಿದರೆ ಅಣ್ಣಪ್ಪ ಬಂಗಾರಿ ವಂದಿಸಿದರು.

ಮಂಗಳವಾರ ದಿನಾಂಕ: 02-05-2018 ತಳಕಲ್ಲ ಉಡಚಮ್ಮದೇವಿ ದೇವಸ್ಥಾನದ ನಮ್ಮೂರ 200ನೇ ಮಾಸಿಕ ಶಿವಾನುಭವ ಕಾರ್ಯಕ್ರಮದಲ್ಲಿ ಡಾ. ಫಕೀರಪ್ಪ ವಜ್ರಬಂಡಿ ಅವರು ಗಮಕ ವಾಚನ ಮತ್ತು ವ್ಯಾಖ್ಯಾನ ನಡೆಸಿಕೊಟ್ಟರು. ಗಮಕ ಕುರಿತಂತೆ ಆರಂಭದಲ್ಲಿ ಮಲಿಕ್‌ಸಾಬ ನೂರಭಾಷಾ ಪರಿಯಾತ್ಮಕ ವಿಚಾರಗಳನ್ನು ತಿಳಿಸಿಕೊಟ್ಟರು. ವೇ.ಮೂ. ಶರಣಯ್ಯ ಬಸಲಿಂಗಯ್ಯ ಹಿರೇಮಠ ಆಧ್ಯಾತ್ಮದ ವಿಷಯ ತಿಳಿಸಿದರು. ಅತಿಥಿಗಳಾಗಿ ಐ.ಜಿ.ಪಾಟೀಲ್, ಎಸ್.ಎ.ಪಾಟೀಲ್, ಗಂಗಾಧರ ಸಜ್ಜನ, ಭೀಮಣ್ಣ ಹೆಳವರ, ಯಲ್ಲಪ್ಪ ನಾಯಕ, ಶರಣಪ್ಪ ಬ್ಯಾಳಿ ಪಾಲ್ಗೊಂಡಿದ್ದರು. ಅಣ್ಣಪ್ಪ ಹನುಮಪ್ಪ ಬಂಗಾರಿ ಕಾರ್ಯಕ್ರಮ ನಿರೂಪಿಸಿದರೆ ಬಸವರಾಜ ನರೇಗಲ್ಲ ಸ್ವಾಗತಿಸಿ ಕೊನೆಗೆ ವಂದಿಸಿದರು.

ದಿನಾಂಕ: 24-06-2018 ರವಿವಾರ ಕೊಪ್ಪಳದ ಪದಕಿಯವರ ಟ್ಯೂಷನ್ ಹಾಲಿನಲ್ಲಿ ಕರ್ನಾಟಕ ಗಮಕ ಕಲಾ ಪರಿಷತ್ತು, ಕೊಪ್ಪಳ ಜಿಲ್ಲಾ ಮತ್ತು ತಾಲೂಕು ಘಟಕಗಳು ಶ್ರೀ ವರಸಿದ್ದಿ ವಿನಾಯಕ ಗ್ರಾಮೀಣ ಅಭಿವೃದ್ಧಿ ಮತ್ತು ಕಲ್ಯಾಣ ಸಂಸ್ಥೆ (ರಿ) ಮಾದಿನೂರ, ಮತ್ತು ಶ್ರೀ ನಿಮಿಷಾಂಭ ಆರ್ಟ್ ಗ್ಯಾಲರಿ ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಶ್ರೀನಿವಾಸ ಚಿತ್ರಗಾರರ ಎರಡು ಕೃತಿಗಳ ಬಿಡುಗಡೆ ಕವಿಗೋಷ್ಠಿ ಹಾಗೂ ಗಮಕ ವಾಚನ ಕಾರ್ಯಕ್ರಮ ಡಾ. ಫಕೀರಪ್ಪ ವಜ್ರಬಂಡಿಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಬೆಂಗಳೂರಿನ ಹಿರಿಯ ಸರಕಾರಿ ಅಭಿಯೋಜಕರಾದ ಬಿ.ಎಸ್.ಪಾಟೀಲರು ಉದ್ಘಾಟನೆ ನರವೇರಿಸಿ ನೋವಾದವರ ಬದುಕಿಗೆ ಚೇತೋಹಾರಿ ತರುವ ಬರವಣಿಗೆಯ ಅಗತ್ಯತೆ ಕುರಿತು ತಿಳಿಸುತ್ತಾ ಗಮಕ ಕಲೆ ಉಳುವಿಗಾಗಿ ನಿರಂತರ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಜಿಲ್ಲಾ ಗಮಕ ಗಮಕ ಕಲಾ ಪರಿಷತ್ತನ್ನು ಅಭಿನಂದಿಸಿದರು. ಸಾಹಿತ ಅಕ್ಬರ್ ಸಿ ಕಾಲಿಮಿರ್ಚಿ 'ಹಿಂಗಾಗಿತ್ತು ನಮ್ಮೂರು' ಮತ್ತು ಶಿ.ಕಾ ಬಡಿಗೇರ ಅವರ ಒಲವಿನ ಓಲೈಕೆಗಳು ಎಂಬ ಕೃತಿಯನ್ನು ಬಿಡುಗಡೆ ಮಾಡಿ ಅವುಗಳ ಅವಲೋಕನ ಮಾಡಿದರು. ಗಮಕಿ ಕೃಷ್ಣ ರಂಗಣ್ಣ ಕುಲಕರ್ಣಿ ಅವರು ಗಮಕದ ಇತಿಹಾಸ ತಿಳಿಸಿ ರನ್ನ ರಚಿತ ಮಹಾಭಾರತದ ದುರ್ಯೋದನನ ಅವಸಾನದ ಸನ್ನಿವೇಶವನ್ನು ಕಣ್ಣಿಗೆ ಕಟ್ಟುವಂತೆ ವಾಚನ ಮಾಡಿ ವ್ಯಾಖ್ಯಾನಿಸಿದ್ದು ಜನಾಕರ್ಷಣೆಗೆ ಪಾತ್ರವಾಯಿತು. ಮುಖ್ಯ ಅತಿಥಿಗಳಾಗಿ ಶಂಭುಲಿಂಗನಗೌಡ ಪಾಟೀಲ್ ಹಲಗೇರಿ, ಷಣ್ಮುಖಪ್ಪ ಚಿತ್ರಗಾರ, ಶಿವಪ್ಪ ಜೋಗಿ, ಮಹೇಶ ಬಳ್ಳಾರಿ, ಈಶ್ವರ ಹತ್ತಿ, ಪುಷ್ಪಲತಾ ಏಳುಭಾವಿ, ಸಿದ್ದಣ್ಣ ಮೇಟಿ, ಮಲಿಕ್‌ಸಾಬ ನೂರಭಾಷಾ, ಶರಣಪ್ಪ ಕೊಪ್ಪದ ಈ ಮೊದಲಾದವರು ಪಾಲ್ಗೊಂಡಿದ್ದರು. 12 ಕವಿಗಳು ಕವನ ವಾಚನ ಮಾಡಿದರು.



ಅನ್ನಪೂರ್ಣಮ್ಮ ಮನ್ನಾಪೂರ ಪ್ರಾರ್ಥಿಸಿದರೆ, ಬಸಪ್ಪ ದೇಸಾಯಿ ಸ್ವಾಗಿತಿಸಿದರು. ಪ್ರಾಸ್ತಾವಿಕವಾಗಿ ಜಿ.ಎಸ್.ಗೊನಾಳರವರು ಮಾತನಾಡಿದರು. ಮೆಹಬೂಬ. ಎಂ ವಂದಿಸಿದರು. ಕೃತಿಕಾರ ಶ್ರೀನಿವಾಸ ಚಿತ್ರಗಾರರನ್ನು ಜಿಲ್ಲಾ ಚುಟುಕು ಸಾಹಿತ್ಯ ಅಧ್ಯಕ್ಷರಾದ ಹನಮಂತಪ್ಪ ಅಂಡಗಿ, ಡಾ. ಫಕೀರಪ್ಪ ವಜ್ರಬಂಡಿ, ಬಿ.ಎಸ್.ಪಾಟೀಲ್, ಕೆ.ಆರ್.ಕುಲಕರ್ಣಿ ಇತರರು ಸನ್ಮಾನಿಸಿ ಸಿಹಿ ಹಂಚಿದರು.

## ಬೆಂಗಳೂರು ಜಿಲ್ಲಾ ವರದಿ

ತ್ರಿವೇಣಿ ಕಲಾ ಸಂಘ ಮತ್ತು ಗುರುಕೃಪಾ ಗಮಕ ಮಂಡಲಿಯ ವತಿಯಿಂದ ಅಧಿಕ ಜ್ಯೇಷ್ಠದ ವಿಶೇಷ ಕಾರ್ಯಕ್ರಮಗಳನ್ನು ಜೂನ್ ತಿಂಗಳಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವು ದಿನಾಂಕ 16–5–2018 ರಿಂದ 15–6–2018 ರವರೆಗೆ ಜರುಗಿತು. ಈ ಕಾರ್ಯಕ್ರಮದಲ್ಲಿ ಮುಖ್ಯವಾಗಿ ಮಹಾಕವಿ ಉಪಮಾಲೋಲ ಲಕ್ಷ್ಮೀಶನ 'ಜೈಮಿನಿ ಭಾರತ ಕಾವ್ಯದ ವಾಚನ ವ್ಯಾಖ್ಯಾನ ಮಾಡಲಾಯಿತು. ಕಲಾಶ್ರೀ ಎಂ.ಆರ್. ಸತ್ಯನಾರಾಯಣ, ಮಾಜಿ ಅಧ್ಯಕ್ಷರು, ಕರ್ನಾಟಕ ಗಮಕ ಕಲಾ ಪರಿಷತ್ತು(ರಿ.) ರವರು ಇದರ ಉದ್ಘಾಟನೆಯನ್ನು ನೆರವೇರಿಸಿದರು. ಈ ಕಾರ್ಯಕ್ರಮದಲ್ಲಿ ವಿವಿಧ ಗಮಕಿಗಳಿಂದ ಒಟ್ಟು ಮೂವತ್ತಮೂರು ಸಂಧಿಗಳನ್ನು ಪ್ರತಿ ದಿನವೂ ವಾಚನ ವ್ಯಾಖ್ಯಾನವನ್ನು ಮಾಡಲಾಯಿತು. ದಿನಾಂಕ 15–6–2018 ರಂದು ಸಮಾರೋಪ ಸಮಾರಂಭವು ಹಿರಿಯ ಗಮಕಿಗಳಿಂದ ಸಮಗ್ರ ಜೈಮಿನಿ ಭಾರತದ ವಾಚನ ಕಾರ್ಯಕ್ರಮ ದೊಂದಿಗೆ ಜರುಗಿತು. ಹಾಗೂ ಹಿರಿಯ ಗಮಕಿ ಎಂ.ಎ. ಜಯರಾಂ ರಾವ್ ರವರಿಂದ ಸಮಾರೋಪ ಭಾಷಣದೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.

ಜ್ಯೇಷ್ಠ ಅಧಿಕ ಮಾಸದ ವಿಶೇಷ ಕಾರ್ಯಕ್ರಮಗಳು "ಲಕ್ಷ್ಮೀಶ ಗಮಕ ಪಾಠಶಾಲೆ" ಯಿಂದ 16–5–2018 ರ ವರೆಗೆ 40 ಕಾರ್ಯಕ್ರಮಗಳು ನಡೆದವು.

ಕಾವ್ಯಗಳು: ಜೈಮಿನಿ– ಕುಮಾರವ್ಯಾಸ– ಭಾಗವತ+ ಕೃಷ್ಣಚರಿತಾಮೃತ– ತುಳಸೀ ಮಹಾತ್ಮೆ+ ಸಂಸ್ಕೃತ ರಾಮಾಯಣ, ಶ್ರೀ ರಾಮಪಟ್ಟಾಭಿಷೇಕ, ದಶಾವತಾರ, ಮಂಕುತಿಮ್ಮನಕಗ್ಗ, ಶ್ರೀ ರಾಮ ಪರೀಕ್ಷಣಂ, ಮಾರುತಿ ಭಕ್ತಿ ದರ್ಪಣ, ಗಿರಿಜಾ ಕಲ್ಯಾಣ.

ಹಾಡಿದವರು– ವಾಸುಕಿ ಶರ್ಮ, ರತ್ನ ಚಂದ್ರಶೇಖರ್, ಗೀತ ಪ್ರಭಾಕರ್, ಗಂಗಮ್ಮ ಕೇಶವಮೂರ್ತಿ, ವಾಸುಕಿ ಶಿಷ್ಯೆಯರು.

ವ್ಯಾಖ್ಯಾನ ಮಾಡಿದವರು– ಶಾಂತಾ ಗೋಪಾಲ್, ಸುನಂದ ಗುರುರಾಜ್, ರಮಾಮಣಿ ಕೃಷ್ಣಮೂರ್ತಿ, ರಾಜಲಕ್ಷ್ಮಿ ಗೋಪಾಲ್, ಗಂಗಮ್ಮ ಕೇಶವಮೂರ್ತಿ

2017–18 ನೇ ಸಾಲಿನ ಗಮಕ ಪರೀಕ್ಷೆಗಳನ್ನು ನಡೆಸಲಾಗಿದ್ದು, ಅದರಲ್ಲಿ ಗಮಕ ಪ್ರಥಮ ಪರೀಕ್ಷೆಗೆ 155 ವಿದ್ಯಾರ್ಥಿಗಳು, ದೇವರನಾಮ ಪ್ರಥಮ ಪರೀಕ್ಷೆಗೆ – 109 ವಿದ್ಯಾರ್ಥಿಗಳು, ದೇವರನಾಮ ಪ್ರೌಢ ಪರೀಕ್ಷೆಗೆ – 99 ವಿದ್ಯಾರ್ಥಿಗಳು, ಕಾಜಾಣ ಪರೀಕ್ಷೆಗೆ ಕೆಲವು ವಿದ್ಯಾರ್ಥಿಗಳು ಪರೀಕ್ಷೆಗಳನ್ನು ತೆಗೆದುಕೊಂಡಿದ್ದು, ತೇರ್ಗಡೆಯಾಗಿ ಪ್ರಥಮಶ್ರೇಣಿ, ದ್ವಿತೀಯಶ್ರೇಣಿ, ಸಾಮಾನ್ಯ ಶ್ರೇಣಿ ಗಳಿಸಿಕೊಂಡಿರುತ್ತಾರೆ. ಗಮಕ ಪರೀಕ್ಷೆಗಳಲ್ಲಿ ತೇರ್ಗಡೆಯಾದವರಿಗೆ ಮತ್ತು ರ್‍ಯಾಂಕ್ ಪಡೆದವರಿಗೆ ಪ್ರಶಸ್ತಿ ಪತ್ರಗಳನ್ನು ಈ ಕಾರ್ಯಕ್ರಮಗಳಲ್ಲಿ ಹಿರಿಯರಾದ ಶ್ರೀ ವೆಂಕಟರಾಮಯ್ಯನವರಿಂದ ಮತ್ತು ಶ್ರೀಮತಿ ಗಿರಿಜಾ ರಾಮಚಂದ್ರ ರವರಿಂದ ಕೊಡಲ್ಪಟ್ಟಿತು.

ಗಮಕ ಕಲೆಯ ಪ್ರಚಾರ ಹೆಚ್ಚಾಗಿ ನಡೆಯಲು ಈ ಅಧಿಕಮಾಸ ಬಹು ಸೂಕ್ತವಾಯಿತು. ಅನೇಕ ಬಡಾವಣೆಗಳಲ್ಲಿ ಈ ಕಾರ್ಯಕ್ರಮಗಳು ನಡೆಸಿದೆವು. ಕಾವ್ಯಾಸಕ್ತರು ಪರಿಷತ್ತಿಗೆ ಸದಸ್ಯರಾದರು ಮತ್ತು ಪೋಷಕರಾದರು ಕೆಲವರು "ದತ್ತಿನಿಧಿ" ಇಟ್ಟರು. ಈ ಕೆಲಸವನ್ನು ಇನ್ನೂ ಹೆಚ್ಚು ಹೆಚ್ಚು ಜನರು ಮಾಡಲೆಂದು ಆಶಿಸುತ್ತೇವೆ.

ಬೆಂಗಳೂರಿನಲ್ಲಿ ಗಮಕ ಪರೀಕ್ಷೆಗೆ ಕಟ್ಟಿದ ವಿದ್ಯಾರ್ಥಿಗಳಿಂದ "ಸರಸ್ವತಿ ಪೂಜೆ" ಮತ್ತು ಪ್ರವೇಶ ಪತ್ರ ವಿತರಣೆ.– ಪರಿಷತ್ತಿನ ಆವರಣದಲ್ಲಿ ನಡೆಸಲಾಯಿತು. ಹಿರಿಯರಾದ ಸಿ. ನಾರಾಯಣ, ಹೈಮಾವತಿ, ಸಿ. ಶ್ರೀಮತಿ ಉಪಸ್ಥಿತರಿದ್ದರು. ಅವರು ಪ್ರವೇಶಪತ್ರವನ್ನು ವಿತರಿಸಿದರು. ವಿದ್ಯಾರ್ಥಿಗಳಿಂದ ಒಂದು ಗಂಟೆ ಕಾಲ ಹಾಡಿಸಲಾಯಿತು.

## ಗಮಕ ರೂಪಕ ಕಾರ್ಯಾಗಾರ

ದಿನಾಂಕ 3–5–18 ರಿಂದ 13–5–18 ರವರೆಗೆ ಪತಿಷತ್ತಿನ ಆವರಣದಲ್ಲಿ ಗಮಕ ರೂಪಕ ಕಾರ್ಯಾಗಾರ ನಡೆಯಿತು. 20 ಜನ ಶಿಕ್ಷಣವನ್ನು ಪಡೆದರು. ಕಡೆಯ ದಿವಸ ಎಂ.ಆರ್. ಎಸ್. ರವರಿಂದ ಎಲ್ಲರಿಗೂ ನೆನಪಿನ ಕಾಣಿಕೆಯನ್ನು ಕೊಡಿಸಿದೆವು. ಇದರ ಬಗ್ಗೆ ಒಳ್ಳೆಯ ಅಭಿಪ್ರಾಯಗಳು ಬಂದಿವೆ.

## ದಾವಣಗೆರೆ ಜಿಲ್ಲಾ ವರದಿ

ದಿನಾಂಕ 23.07.2018ರಂದು ಹರಿಹರದ ಓಂಕಾರ ಮಠದಲ್ಲಿ "ಚಾತುರ್ಮಾಸೀ ಗಮಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಗಮಕ ವಾಚನವನ್ನು ಶ್ರೀಮತಿ ಸುಜಾತ ಗೋಪಿನಾಥ್ ಹಾಗೂ ವ್ಯಾಖ್ಯಾನವನ್ನು ಶ್ರೀಮತಿ ರಮಾ ಜಕಾತಿಯವರು ಬಹಳ ಅಚ್ಚುಕಟ್ಟಾಗಿ ನೆರವೇರಿಸಿಕೊಟ್ಟರು.

ದಿನಾಂಕ 25.07.2018 ಬುಧವಾದ ಸಂಜೆ 6.00ಗಂಟೆಗೆ ಹರಿಹರದ ಗುತ್ತೂರು ಕಾಲೋನಿಯ ಶ್ರೀಮತಿ ಸರಳಾ ಅವರ ಮನೆಯಲ್ಲಿ "ಗಜೇಂದ್ರ ಮೋಕ್ಷ" ಭಾಗದ ವಾಚನವನ್ನು ಶ್ರೀಮತಿ ಚಂದ್ರಕಲಾ ನಾಯಕ್ ಅವರು ಹಾಗೂ ವ್ಯಾಖ್ಯಾನವನ್ನು ಶ್ರೀಮತಿ ನಳಿನಿ ಚಂದ್ರಣ್ಣನವರು ನೆರವೇರಿಸುವುದರ ಮೂಲಕ ಶ್ರೀ ಲಕ್ಷ್ಮೀಶ ಕಲಾಸಂಘದ ಆಶ್ರಯದಲ್ಲಿ ಪ್ರಾರಂಭಿಸಿರುವ "ಗಮಕ ತೋರಣ"ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ ನೀಡಿದರು.

## ಮೈಸೂರು ಜಿಲ್ಲಾ ವರದಿ

ಮೈಸೂರು ಜಿಲ್ಲಾ ಗಮಕ ಕಲಾ ಪರಿಷಷತ್ತಿನ ವತಿಯಿಂದ ಹಿರಿಯ ಗಮಕಿ ಕರ್ನಾಟಕ ಕಲಾಶ್ರೀ ಕೃ. ರಾಮಚಂದ್ರ ಅವರ ನಿವಾಸದಲ್ಲಿ ಪ್ರತಿ ತಿಂಗಳು ನಡೆಸುತ್ತಿರುವ ಪು.ತಿ.ನ. ಅವರ **'ಶ್ರೀಹರಿ ಚರಿತೆ '** ಕಾವ್ಯದ ಗಮಕ ವ್ಯಾಸಂಗ ಗೋಷ್ಠಿಯ 11, 12 ಮತ್ತು 13ನೇ ಉಲ್ಲಾಸವು ಮೇ, ಜೂನ್ ಮತ್ತು ಜುಲೈ ತಿಂಗಳಿನಲ್ಲಿ ವಿಶಿಷ್ಟವಾಗಿ, ಅರ್ಥಪೂರ್ಣವಾಗಿ ನೆರವೇರಿತು. ಕಾರ್ಯಕ್ರಮದಲ್ಲಿ ಶ್ರೀಮತಿ ಶಿಲ್ಪಶ್ರೀ, ಶ್ರೀಮತಿ ಲತಾ ಸೋಮಶೇಖರ್, ಶ್ರೀ ಗಣೇಶ್ ಉಡುಪ ಅವರು ವಾಚನವನ್ನು ನೆರವೇರಿಸಿದರೆ, ಅದಕ್ಕೆ ಕ್ರಮವಾಗಿ ಶ್ರೀಮತಿ ಸುಮಾ ರವಿಕಿರಣ್, ಡಾ. ಜ್ಯೋತಿಶಂಕರ್, ಹಾಸನದ ವಿದ್ವಾನ್ ಮಂಜುನಾಥ್ ಅವರು ವ್ಯಾಖ್ಯಾನವನ್ನು ನೀಡಿದರು.

ದಿನಾಂಕ 27–06–2018ರಂದು ಶ್ರೀಯುತ ಗಜಾನನ ಹೆಗಡೆ ಅವರ ನಿವಾಸದಲ್ಲಿ ಅವರೇ ರಚಿಸಿರುವ 'ರಸ ರಾಮಾಯಣ' ಕಾವ್ಯದಲ್ಲಿನ ಪ್ರಧಾನ ಸ್ತ್ರೀ ಪಾತ್ರಗಳ ಬಗ್ಗೆ ವಾಚನ ಮತ್ತು ವ್ಯಾಖ್ಯಾನವನ್ನು ಕರ್ನಾಟಕ ಕಲಾಶ್ರೀ ಕೃ. ರಾಮಚಂದ್ರ ಹಾಗೂ ವಿದುಷಿ ಡಾ. ಜ್ಯೋತಿಶಂಕರ್ ನೆರವೇರಿಸಿಕೊಟ್ಟರು. ಹಿರಿಯ ಸ್ವಾತಂತ್ರ್ಯ ಹೋರಾಟಗಾರ್ತಿಯಾದ ಶ್ರೀಮತಿ ಕೆ.ಎಲ್. ಅಲಮೇಲಮ್ಮ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು.

ದಿನಾಂಕ 03–06–2018ರಂದು ಮೈಸೂರು ಜಿಲ್ಲಾ ಗಮಕ ಪರಿಷತ್ತಿನ ವತಿಯಿಂದ ಬಿ.ಕೆ. ಶಾಮಣ್ಣ ಅವರ ಜನ್ಮ ಶತಾಬ್ಧಿ ಸಂದರ್ಭ ಬಿ.ಎಸ್. ಜಗನ್ನಾಥ ಅವರ ದತ್ತಿ ಕಾರ್ಯಕ್ರಮ ನೆರವೇರಿತು. ಶ್ರೀ ರಾಮಾಯಣ ದರ್ಶನಂ ಕಾವ್ಯದ 'ರೈ ಗೆ ಕರೆದೊಯ್ ಓ ಅಗ್ನಿ' ಎಂಬ ಕಾವ್ಯ ಭಾಗವನ್ನು ಶ್ರೀಮತಿ ಭಾಗ್ಯ ಅವರು ವಾಚಿಸಿದರೆ ವ್ಯಾಖ್ಯಾನವನ್ನು ಶ್ರೀಮತಿ ಕೆ.ಎಲ್. ಪದ್ಮಿನಿ ಹೆಗಡೆ ನೆರವೇರಿಸಿಕೊಟ್ಟರು.

ದಿನಾಂಕ 12–06–2018ರಂದು ಮೈಸೂರಿನ 'ಹರಿಪ್ರಿಯ'ದಲ್ಲಿ ಅಧಿಕ ಆಷಾಢಮಾಸದ ಗಮಕ ಗಾಯನ ಗೋಷ್ಠಿ ನೆರವೇರಿತು. ಜಗನ್ನಾಥ ದಾಸರ 'ಹರಿಕಥಾಮೃತ ಸಾರ'ದ ಕಾವ್ಯಗಳ ಪದ್ಯಗಳನ್ನು ಮೈಸೂರಿನ ಗಮಕಿಗಳೆಲ್ಲರೂ ಹಾಡಿ ಆನಂದಿಸಿದರು.

## ತುಮಕೂರು ಜಿಲ್ಲಾ ವರದಿ

ಪ್ರತಿ ತಿಂಗಳ ಮೊದಲನೇ ಶುಕ್ರವಾರ ನಗರದ ಶಿವಮೂಕಾಂಬಿಕಾನಗರದಲ್ಲಿರುವ ನಿಮಿಷಾಂಬಾ ದೇವಾಲಯದಲ್ಲಿ ಗಮಕ ವಾಚನ–ವ್ಯಾಖ್ಯಾನ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದೆ. ಇದರ ಅಂಗವಾಗಿ ದಿನಾಂಕ 04.05.2018ರಂದು ರಾಷ್ಟ್ರಕವಿ ಕುವೆಂಪು ವಿರಚಿತ 'ರಾಮಾಯಣದರ್ಶನಂ' ನ 'ಶಬರಿಯ ಆತಿಥ್ಯ' ಭಾಗವನ್ನು ಗಮಕಿ ಶ್ರೀಮತಿ ಲಕ್ಷ್ಮೀಜೈಪ್ರಕಾಶ್ ಅವರು ತಮ್ಮ ಮಧುರ ಕಂಠದಲ್ಲಿ ವಾಚಿಸಿದರೆ ಗಮಕಿ ಗ ಸೀ ಶ್ರೀನಿವಾಸಮೂರ್ತಿ ಅವರು ಅಷ್ಟೇ ವಿದ್ವತ್ ಪೂರ್ಣವಾಗಿ ವ್ಯಾಖ್ಯಾನಿಸಿದರು.

ದಿನಾಂಕ 01.06.2018ರಂದು 'ಕುಮಾರವ್ಯಾಸ ಭಾರತ' ದ 'ಶಲ್ಯ ಸಾರಥ್ಯ' ಭಾಗವನ್ನು ಗಮಕಿ ಶ್ರೀಮತಿ ಸಂಧ್ಯಾ ಎನ್ ಅವರು ಭಾವಪೂರ್ಣವಾಗಿ ವಾಚಿಸಿದರು. ಗಮಕಿ ಶ್ರೀಮತಿ ಕುಸುಮಾಅನಂತರಾಮಯ್ಯ ಅವರು ಹಿತಮಿತವಾದ ವಿವರಣೆಯೊಂದಿಗೆ ವ್ಯಾಖ್ಯಾನ ಮಾಡಿದರು.

ದಿನಾಂಕ 06.07.2018ರಂದು 'ಕುಮಾರವ್ಯಾಸ ಭಾರತ' ದ ಉತ್ತರ ಗೋಗ್ರಹಣ' ಭಾಗವನ್ನು ಗಮಕಿ ಶ್ರೀದೇವಿ ಅನಂತರಾಮು ಅವರು ಸುಶ್ರಾವ್ಯವಾಗಿ ವಾಚಿಸಿದರೆ ಗಮಕಿ ಶ್ರೀ ಎಂ ಜಿ ಸಿದ್ಧರಾಮಯ್ಯನವರು ವಿದ್ವತ್ ಪೂರ್ಣ ವ್ಯಾಖ್ಯಾನ ಮಾಡಿದರು.

# ವ್ಯಕ್ತಿ ಪರಿಚಯ

## "ಕಲಾವಿದ ಸತ್ತರೂ – ಕಲೆಯ ಮೂಲಕ ಜೀವಂತ"



ಗಮಕಿ ಹಾ.ಸು. ಗೋಪಾಲಕೃಷ್ಣ
ಜನನ:14.08.1933 ಮರಣ:12–07–2018

ಗಮಕ ಕಲೆಯಲ್ಲಿ ನಿಷ್ಣಾತರಾಗಬೇಕಾದರೆ ಪೂರ್ವಜನ್ಮ ಸುಕೃತದಿಂದ ಮಾತ್ರ ಸಾಧ್ಯ. ಸಾವಿರಾರು ಜನ ಕವಿಗಳಾಗಬಹುದು, ಕಾರಣ, ಕಾವ್ಯವನ್ನು ರಚಿಸಲು ಆತ್ಮ ಸಂಸ್ಕಾರಬೇಕು. ಆದರೆ ಕಾವ್ಯವಾಚನ ಮಾಡುವುದು ಸರಸ್ವತಿಯ ಅನುಗ್ರಹವುಳ್ಳವನಿಗೆ ಮಾತ್ರ ಸಾಧ್ಯ ಎಂಬ ರಾಜಶೇಖರನ ಮಾತು ಸಾರ್ವಕಾಲಿಕ ಸತ್ಯ. ಈ ಹಿನ್ನೆಲೆಯಲ್ಲಿ ಹಾಸನದ ಸಿರಿಕಂಠದ ಹಿರಿಯ ಗಮಕಿ ಹಾ.ಸು.ಗೋಪಾಲಕೃಷ್ಣ ನಮ್ಮನ್ನಗಲಿ [12.07.2010] ಎರಡು ವರ್ಷವಾದರೂ ಸಹ, ಗಮಕ ಕಲೆಯ ಮೂಲಕ ಜೀವಂತವಾಗಿದ್ದಾರೆ. ಗಮಕಿ ಹಾ.ಸು.ಗೋಪಾಲಕೃಷ್ಣರವರು ದಿನಾಂಕ 14.08.1933 ರಂದು ಶ್ರೀಮತಿ ನಂಜಮ್ಮ ಮತ್ತು ಹಂದಿನಕೆರೆ ಶ್ರೀ ಸುಬ್ಬರಾಯರವರ ದ್ವಿತೀಯ ಪುತ್ರನಾಗಿ ಜನಿಸಿದವರು.

ಶ್ರೀಯುತರು ಎಸ್.ಎಸ್.ಎಲ್.ಸಿ.ಯ ನಂತರ ಬೆರಳಚ್ಚು ಮತ್ತು ಶೀಘ್ರಲಿಪಿಯಲ್ಲಿ ಸೀನಿಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಲೋಕೋಪಯೋಗಿ ಇಲಾಖೆಯಲ್ಲಿ ಬೆರಳಚ್ಚುಗಾರನಾಗಿ, ನಂತರ ಕೃಷಿ ಇಲಾಖೆಯಲ್ಲಿ ಶೀಘ್ರಲಿಪಿಗಾರರಾಗಿ ಸೇವೆ ಸಲ್ಲಿಸಿ ದಿನಾಂಕ 30.08.1991 ರಂದು ವೃತ್ತಿಯಿಂದ ನಿವೃತ್ತರಾದರು.

ಇವರು ಗಮಕ ಕ್ಷೇತ್ರಕ್ಕೆ ಬಂದುದೇ ಒಂದು ಸೋಜಿಗ. ಇವರು ಪ್ರಾಥಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವಾಗ ಇವರ ಕನ್ನಡದ ಗುರುಗಳಾದ ಶ್ರೀ ಲಕ್ಷ್ಮೀಕಾಂತಯ್ಯನವರು ಬಕಾಸುರವಧೆಯ ಪದ್ಯಗಳನ್ನು ಸುಶ್ರಾವ್ಯವಾಗಿ ವಾಚನಮಾಡುತ್ತಾ ಪಾಠ ಹೇಳಿಕೊಡುತ್ತಿದ್ದರು, ಇದನ್ನು ಆಲಿಸುತ್ತಿದ್ದ, ಗೋಪಾಲಕೃಷ್ಣ, ಪುಳಕಿತನಾಗಿ ಪ್ರಭಾವಿತನಾಗಿ ಗಮಕ ಕಲೆಯ ಪ್ರವೇಶಕ್ಕೆ ಭೂಮಿಕೆಯನ್ನು ರಚಿಸಿಕೊಂಡರು. ಇದು ಅವರ ಮಹತ್ತರ ತಿರುವು. ವಿದ್ಯಾಭ್ಯಾಸ ಮುಗಿದ ನಂತರ 1954–1956ರ ಅವಧಿಯಲ್ಲಿ ಕೃಷ್ಣರಾಜನಗರದ ಲೋಕೋಪಯೋಗಿ ಇಲಾಖೆಯಲ್ಲಿ ಬೆರಳಚ್ಚುಗಾರರಾಗಿ ಕೆಲಸಮಾಡುತ್ತಿದ್ದಾಗ, ಚಾಮರಾಜನಗರದ ಉದ್ದಾಮ ಗಮಕಿಗಳಾದ ಶ್ರೀ ಸುಬ್ರಹ್ಮಣ್ಯಂ ಅವರಿಂದ ಗಮಕ ವಾಚನದ ಪ್ರಥಮ ಪಾಠಗಳನ್ನು ಕರಗತ ಮಾಡಿಕೊಂಡರು. ನಂತರ ಕೇರಳಾಪುರದ ಖ್ಯಾತ ಗಮಕಿ ಶ್ರೀ ಸುಬ್ಬರಾಯರ ಯೋಗ್ಯ ಮಾರ್ಗದರ್ಶನದಲ್ಲಿ ಗಾಯನ ಕಲೆ ಪಕ್ವವಾಯಿತು. ನಂತರ 1956ರಲ್ಲಿ ಪುನಃ ಹಾಸನಕ್ಕೆ ಬಂದಾಗ ಗಮಕಿ ನಂ. ಅಶ್ವತ್ಥನಾರಾಯಣ ರಾಯರ ಮಾರ್ಗದರ್ಶನದಲ್ಲಿ ಗಮಕ ಪರೀಕ್ಷೆಗೆ ಕುಳಿತು ತೇರ್ಗಡೆಯಾದರು.

1962ರಿಂದ 1970ರವರೆಗೆ ಹಾಸನದ ಹೆಸರಾಂತ "ಮಿತ್ರವೃಂದ" ಕಾರ್ಯದರ್ಶಿಯಾಗಿದ್ದು, ಆ ಅವಧಿಯಲ್ಲಿ ಮಿತ್ರವೃಂದದ ಆಶ್ರಯದಲ್ಲಿ ಗಮಕ, ಕನ್ನಡ ಕಾವ, ಜಾಣ, ರತ್ನ ಇವುಗಳ ತರಗತಿಗಳನ್ನು ಪ್ರಾರಂಭಿಸಲಾಯಿತು. ಆಗ ಕನ್ನಡ ರತ್ನ ತರಗತಿಯನ್ನು ಪೂಜ್ಯ ತೀ.ನಂ.ಶ್ರೀ ಉದ್ಘಾಟಿಸಿದ್ದರು.

ಗಮಕಿ ಗೋಪಾಲಕೃಷ್ಣರವರು ಚಿತ್ರದುರ್ಗ ಮತ್ತು ಚಿಕ್ಕಮಗಳೂರಿನಲ್ಲಿ ಸುಮಾರು 14–15 ವರ್ಷಗಳ ಕಾಲ ಉಚಿತ ಗಮಕ ತರಗತಿಗಳನ್ನು ನಡೆಸಿಕೊಟ್ಟಿರುತ್ತಾರೆ. ಬಹುಮುಖ್ಯವಾಗಿ ಹಾಸನ ಮತ್ತು ಚಿತ್ರದುರ್ಗದಲ್ಲಿ, ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿ ಗಮಕ ತರಗತಿಗಳನ್ನು ನಡೆಸಿ, ಆ ಮೂಲಕ ನೂರಾರು ಉಪಾಧ್ಯಾಯರುಗಳು ಗಮಕಿಗಳಾಗಿರುವುದು ಒಂದು ಹೆಗ್ಗಳಿಕೆಯ ವಿಷಯ.

ಅನೇಕ ವರ್ಷಗಳು ಬೆಂಗಳೂರು ಮತ್ತು ಹಾಸನ ಆಕಾಶವಾಣಿ ಕೇಂದ್ರಗಳಲ್ಲಿ ಇವರ ಕಾವ್ಯವಾಚನ ಬಿತ್ತರಗೊಂಡಿದೆ. ಆಕಾಶವಾಣಿಯ ವಿಶೇಷ ಕಾರ್ಯಕ್ರಮಕ್ಕಾಗಿ ಇವರು ಸಂಯೋಜಿಸಿದ ಮಹಾಕವಿ ಪಂಪ ಜನಪ್ರಿಯವಾಗಿದೆ. ಅನೇಕ ಜಿಲ್ಲೆಗಳಲ್ಲಿ ಹಾಗೂ ಹೊರರಾಜ್ಯಗಳಾದ ಹೈದರಾಬಾದ್, ಮದ್ರಾಸ್, ದೂರದ ಚಂಡೀಘಡ ಮುಂತಾದ ನಗರಗಳ ಕನ್ನಡ ಸಂಘಗಳಲ್ಲಿ ಕೂಡ ಕಾವ್ಯವಾಚನ ಮಾಡಿದ್ದಾರೆ.

ಶ್ರೀ ಕು.ವೆಂ.ಪು. ಜನ್ಮ ಶತಾಬ್ದಿಯ ಪ್ರಯುಕ್ತ ಹಾಸನದ ವಿವೇಕಾನಂದ ಯೋಗಶಾಲೆಯಲ್ಲಿ ಪ್ರತಿದಿನ ಬೆಳಗ್ಗೆ ನಡೆಯುತ್ತಿದ್ದ ಶ್ರೀರಾಮಾಯಣದರ್ಶನಂ ಮಹಾಕಾವ್ಯದ ವಾಚನ, ವ್ಯಾಖ್ಯಾನವನ್ನು ಸತತ ಎರಡು ವರ್ಷಗಳ ಕಾಲ ನಡೆಸಿಕೊಟ್ಟಿರುತ್ತಾರೆ. ಸುಮಾರು 14 ವರ್ಷಗಳ ಕಾಲ ಹಾಸನ ನಗರದ ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನದಲ್ಲಿ, ಕುಮಾರವ್ಯಾಸ ಭಾರತ, ಹರಿಶ್ಚಂದ್ರ ಕಾವ್ಯ, ತೊರವೆ ರಾಮಾಯಣ, ದೇವಿ ಮಹಾತ್ಮೆ

ಇವುಗಳ ಕಾವ್ಯವಾಚನ ಮಾಡಿರುತ್ತಾರೆ. ಆ ಸಂದರ್ಭದಲ್ಲಿ ಇವರ ಕಾವ್ಯವಾಚನಕ್ಕೆ ಗೊರೂರು ರಾಮಸ್ವಾಮಿ ಅಯ್ಯಂಗಾರ್ ರವರ ಸಹೋದರ ಶ್ರೀ ನರಸಿಂಹಾಚಾರ್ ಹಾಗೂ ಪರಾಶರಾಲಯದ ಪಂಡಿತ ಸುಬ್ಬರಾಯರು ವ್ಯಾಖ್ಯಾನ ಮಾಡಿರುತ್ತಾರೆ.

ಚೀರನಹಳ್ಳಿ ನಾರಾಯಣರಾಯರ ಮಹಾಶಿವರಾತ್ರಿ ಸಂದರ್ಶನ ಕಾವ್ಯ, ಹಾಸನ ಜನಮಿತ್ರದ ಸಂಪಾದಕರಾದ ಕೃ.ನ.ಮೂರ್ತಿಯವರ ಕೃತಿ "ನರಸಿಂಗನ ವಚನ" ಮತ್ತು ಪ್ರೊ.ಎಸ್.ವಿ. ಪರಮೇಶ್ವರ ಭಟ್ಟರ ಕಾಳಿದಾಸ, ಡಾ॥ಎ.ಎಸ್.ವೇಣುಗೋಪಾಲರಾವ್ ವಿರಚಿತ "ಮೌಲ್ಯಾಲಿಂಗನ" ಇಂತಹ ಕೃತಿಗಳನ್ನು ಕರಡು ಪ್ರತಿಯ ಹಂತದಲ್ಲೇ ವಾಚನ ಮಾಡಿ ಸೈ ಎನಿಸಿಕೊಂಡಿದ್ದರು ಗಮಕಿ ಗೋಪಾಲಕೃಷ್ಣರವರು.

ಇವರು ಸುಮಾರು 14 ವರ್ಷಗಳ ಕಾಲ ಕರ್ನಾಟಕ ಗಮಕ ಕಲಾಪರಿಷತ್ತಿನ ಹಾಸನ ಜಿಲ್ಲಾ ಪ್ರತಿನಿಧಿಯಾಗಿ ನೂರಾರು ಕಾರ್ಯಕ್ರಮಗಳನ್ನು ನಡೆಸಿದ್ದು, ಬಹುಮುಖ್ಯವಾಗಿ ಮನೆ ಮನೆ ಗಮಕ ಗೋಷ್ಠಿಸಹ ಒಂದು.

ಚಿಕ್ಕಮಗಳೂರು ಜಿಲ್ಲೆ ದೇವನೂರಿನಲ್ಲಿ ನಡೆದ ಕವಿ ಜಯಂತ್ಯೋತ್ಸವ ಸಂದರ್ಭದಲ್ಲಿ ನಾಡಿನ ಮುಖ್ಯ ನ್ಯಾಯಾಧೀಶರಾಗಿದ್ದ ಶ್ರೀ ಹೊಂಬಯ್ಯ ನವರಿಂದ ಸನ್ಮಾನಿಸಲ್ಪಟ್ಟಿದ್ದಾರೆ. ಹಾಸನ ಜಿಲ್ಲೆ ವರ್ತಕ ಸಂಘ, ರೋಟರಿ, ಲಯನ್ಸ್ ಮುಂತಾದ ಸಂಘ ಸಂಸ್ಥೆಗಳು ಗೌರವಿಸಿ ಪ್ರಶಸ್ತಿ ಪ್ರಧಾನ ಮಾಡಿರುತ್ತಾರೆ. ಚನ್ನರಾಯಪಟ್ಟಣದ ಕರ್ನಾಟಕ ಸಂಘದವರು ಕುಮಾರವ್ಯಾಸ ಜಯಂತಿ ಸಂದರ್ಭದಲ್ಲಿ ಸನ್ಮಾನಿಸಿದ್ದಾರೆ. ಹಾಸನದ ಮನೆ ಮನೆ ಗಮಕ ಗೋಷ್ಠಿಯಿಂದ ಸನ್ಮಾನಿತರಾಗಿದ್ದರು.

ಗಮಕಿ ಗೋಪಾಲಕೃಷ್ಣರವರ ಜೀವನದಲ್ಲಿ ನಡೆದ ಮರೆಯಲಾಗದ ಘಟನೆಗಳೆಂದರೆ "ಕವಿಮುದ್ದಣನ" ಶತಮಾನೋತ್ಸವ ಸಂದರ್ಭದಲ್ಲಿ ಕವಿವರ್ಯರಾದ ಶ್ರೀ ಕೈಯಾರ ಕೀಯಣ್ಣರೈ ಮತ್ತು ಶ್ರೀ ಎಸ್.ವಿ.ಪರಮೇಶ್ವರ ಭಟ್ಟರ ಸಮ್ಮುಖದಲ್ಲಿ, ಮುದ್ದಣನ "ರಾಮಾಶ್ವಮೇಧ" ಕಾವ್ಯದ ಕಾವ್ಯವಾಚನ ಹಾಗೂ ಮೈಸೂರಿನ ಹೊಯ್ಸಳ ಕನ್ನಡ ಸಂಘದವರು ಹಮ್ಮಿಕೊಂಡಿದ್ದ ಸು.ಜ.ನಾ.ರವರ ಸನ್ಮಾನ ಸಮಾರಂಭದಲ್ಲಿ ಸು.ಜ.ನಾ.ರವರು ರಚಿಸಿದ ಮಹಾಕಾವ್ಯ "ಯುಗ ಸಂಧ್ಯಾಕಾವ್ಯ"ವನ್ನು ಸು.ಜ.ನಾ.ರವರ ಎದುರಿಗೆ ವಾಚನ ಮಾಡಿದ್ದು. ದಿ॥ ಎಸ್.ವಿ.ಪರಮೇಶ್ವರ ಭಟ್ಟರ "ಕಾಳಿದಾಸನ ಸಮಗ್ರ ಕಾವ್ಯ" ಪ್ರಕಟಗೊಂಡಾಗ, ಮಿತ್ರವೃಂದದ ವತಿಯಿಂದ ಪರಮೇಶ್ವರ ಭಟ್ಟರಿಗೆ ಮಾಡಿದ ಸನ್ಮಾನ ಅವಿಸ್ಮರಣೀಯ ಕ್ಷಣ, ಗೋಪಾಲಕೃಷ್ಣರವರ ಜೀವನದಲ್ಲಿ.

ಇದಲ್ಲದೆ ಗಮಕಿ ಗೋಪಾಲಕೃಷ್ಣರ ಗ್ರಂಥ ಭಂಡಾರವನ್ನು ವೀಕ್ಷಿಸುವುದೇ ಒಂದು ವಿಶೇಷ ಅನುಭವ, ಗ್ರಂಥ ಭಂಡಾರದಲ್ಲಿ ಪ್ರಾಚೀನ, ಅರ್ವಾಚೀನ, ಸಮಕಾಲೀನ ಕಾವ್ಯಗಳಿಗೆ ಸಂಬಂಧಿಸಿದ ಗ್ರಂಥಗಳು (ವೀಕ್ಷಕರಿಗೆ) ಸಾಹಿತಿಗಳಿಗೆ ಮುದ ನೀಡುತ್ತಿತ್ತು. ಅಲ್ಲಿ ಏನಿದೆ ಎನ್ನುವುದಕ್ಕಿಂತ ಏನಿಲ್ಲ ಎಂದರೆ ಹೆಚ್ಚು ಸಮಂಜಸ.

ಗೋಪಾಲಕೃಷ್ಣರವರು ಗಮಕ – ವಾಚನ ಮತ್ತು ವ್ಯಾಖ್ಯಾನಗಳಲ್ಲಿ ಸವ್ಯಸಾಚಿಯಾಗಿದ್ದರು. ಇವರು ಪರಮಪೂಜ್ಯ ಶ್ರೀಧರ ಸ್ವಾಮಿಗಳ ಪರಮಭಕ್ತರಾಗಿದ್ದರು.

ಹಾಸನದ ಸಿರಿಕಂಠದ ಹಿರಿಯ ಗಮಕಿ ಹಾ.ಸು. ಗೋಪಾಲಕೃಷ್ಣರವರು, 77 ವರ್ಷ ತುಂಬು ಜೀವನ ನಡೆಸಿ ದಿನಾಂಕ 12.07.2010ರಲ್ಲಿ ತಮ್ಮ ಇಹಲೋಕ ವ್ಯಾಪಾರ ಮುಗಿಸಿದರು.

ವಿಶೇಷವೇನೆಂದರೆ ಅವರು ಸಾಯುವ 3 ತಿಂಗಳ ಮುಂಚೆ ಹಾಸನ ಆಕಾಶವಾಣಿಯಲ್ಲಿ ತಮ್ಮ ಸಿರಿಕಂಠದಿಂದ ಕಾವ್ಯ ವಾನಚ ಮೊಳಗಿಸಿ, ಅಲ್ಲಿದ್ದವರನ್ನು ಆ ವಯಸ್ಸಿನಲ್ಲಿ ಬೆರಗಾಗಿಸಿದ್ದು. ಹಾಸನದ ಸಿರಿ ಕಂಠದ ಹಿರಿಯ ಗಮಕಿ ಹಾ.ಸು.ಗೋಪಾಲಕೃಷ್ಣ ಇನ್ನು ನೆನಪು ಮಾತ್ರ. ಹಾಸನದ ಸಿರಿಕಂಠದ ಹಿರಿಯ ಗಮಕಿ ಹಾ.ಸು.ಗೋಪಾಲಕೃಷ್ಣ ರವರು ನಮ್ಮನ್ನಗಲಿ (12.07.2010) ಎರಡು ವರ್ಷವಾದ ಈ ಸಂದರ್ಭದಲ್ಲಿ ಅವರಿಗೆ ನುಡಿ ನಮನದೊಂದಿಗೆ ವ್ಯಕ್ತಿಪರಿಚಯ.



**ಬೆಳವಾಡಿ ಅಶ್ವತ್ಥನಾರಾಯಣ**
ಮೊ.: 8105915747

# ಕರ್ನಾಟಕ ಗಮಕ ಕಲಾ ಪರಿಷತ್ತು(ರಿ.)

2ನೇ ಮಹಡಿ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, 3ನೇ ಮುಖ್ಯರಸ್ತೆ, ಎನ್.ಆರ್. ಕಾಲೋನಿ, ಬೆಂಗಳೂರು- 560019
ದೂ. 080-26622962
web: www.karnatakagamakakala.org Email: karnatakagamakakalaparishat@gmail.com

## ಪರಿಷತ್ತಿನ ಸರ್ವಸದಸ್ಯರ 36ನೆಯ ಮಹಾಸಭೆಯ ತಿಳಿವಳಿಕೆ ಪತ್ರ.

**ಮಾನ್ಯರೆ,** **ದಿನಾಂಕ :08-08-2018.**

ದಿನಾಂಕ 09, ಸೆಪ್ಟೆಂಬರ್ 2018 ನೇ ಭಾನುವಾರ ಬೆಳಗ್ಗೆ 11.00 ಗಂಟೆಗೆ ಕರ್ನಾಟಕ ಗಮಕ ಕಲಾ ಪರಿಷತ್ತಿನ ಸರ್ವಸದಸ್ಯರ 36 ನೆಯ ವಾರ್ಷಿಕ ಮಹಾಸಭೆಯನ್ನು ಏರ್ಪಡಿಸಲಾಗಿದೆ. ತಾವು ಈ ಸಭೆಗೆ ಆಗಮಿಸಿ, ತಮ್ಮ ಅಮೂಲ್ಯ ಸಲಹೆಗಳನ್ನಿತ್ತು ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

(ಅಧ್ಯಕ್ಷರ ಅನುಮತಿಯ ಮೇರೆಗೆ)
ಶ್ರೀಮತಿ ಶಾಂತಾ ಗೋಪಾಲ್
ಕಾರ್ಯದರ್ಶಿಗಳು,ಕ.ಗ.ಕ.ಪರಿಷತ್ತು(ರಿ.)

**ವಿಷಯಸೂಚಿ**

1. ಪ್ರಾರ್ಥನೆ
2. ಸ್ವಾಗತ
3. ಸಭೆಯ ತಿಳಿವಳಿಕೆ ಪತ್ರವನ್ನು ಓದುವುದು.
4. ದಿನಾಂಕ 11-06-2017 ರಂದು ನಡೆದ ಸರ್ವ ಸದಸ್ಯರ 35ನೆಯ ಮಹಾಸಭೆಯ ಕಾರ್ಯಕಲಾಪಗಳ ವರದಿ ಮಂಡನೆ-ಸ್ವೀಕಾರ.
5. ಪರಿಷತ್ತಿನ 2017-18 ರ ಪರಿಶೋಧಿತ ಲೆಕ್ಕ ಪತ್ರವನ್ನು ಅಂಗೀಕರಿಸುವುದು.
6. 2018-19 ರ ಅಂದಾಜು ಆಯ-ವ್ಯಯವನ್ನು ಅಂಗೀಕರಿಸುವುದು.
7. 2017-18 ನೇ ಸಾಲಿನ ವಾರ್ಷಿಕ ವರದಿ.
8. 2018-19 ನೇ ಸಾಲಿಗೆ ಲೆಕ್ಕಪರಿಶೋಧಕರ ನೇಮಕ ಮಾಡುವುದು.
9. ಸದಸ್ಯರು ಕಳುಹಿಸಿರುವ ಸಲಹೆ ಸೂಚನೆಗಳ ಪರಿಶೀಲನೆ.
10. ಅಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಷಯಗಳು.
11. ಅಧ್ಯಕ್ಷರ ಭಾಷಣ
12. ವಂದನಾರ್ಪಣೆ

ವಿ.ಸೂ.: 1. ಸದಸ್ಯರ ಸಲಹೆ-ಸೂಚನೆಗಳೇನಾದರೂ ಇದ್ದರೆ ಸಭೆಗೆ 25-7-2018 ರ ಮೊದಲು ಪರಿಷತ್ತಿನ ಕಾರ್ಯಾಲಯಕ್ಕೆ ಕಳುಹಿಸಿಕೊಡಲು ಕೋರಲಾಗಿದೆ.
2. ಸಭಾಕಾರ್ಯಕ್ರಮಾನಂತರ ಭೋಜನ ವ್ಯವಸ್ಥೆ ಏರ್ಪಡಿಸಲಾಗಿದೆ.
3. ಈ ಪ್ರಕಟಣೆಯನ್ನೇ ವೈಯಕ್ತಿಕ ಆಹ್ವಾನ ಎಂದು ಪರಿಗಣಿಸಬೇಕಾಗಿ ಕೋರಿಕೆ.

**ಸಭೆ ನಡೆಯುವ ಸ್ಥಳ : ಎಂ.ವಿ.ಸೀ. ಸಭಾಂಗಣ, (ಬಿ.ಎಂ.ಶ್ರೀ. ಪ್ರತಿಷ್ಠಾನ)**
**ಬಿ.ಎಂ.ಶ್ರೀ ಕಲಾಭವನ, 3ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು-19.**

## ಗಮಕ ರಸಪ್ರಶ್ನೆ - 3

1. ಗಮಕಿಗಳ ಅಚ್ಚುಮೆಚ್ಚಿನ ರಾಘವಾಂಕನ ಕಾವ್ಯ ಯಾವುದು?
2. ಕರ್ನಾಟಕ ದರ್ಶಿನಿ ಮಾಸಪತ್ರಿಕೆ ಹೊರತಂದ ಧೀಮಂತ ಮಹಿಳೆ ಯಾರು ?
3. ಪುರಾಣದ ಪ್ರಕಾರ ಯಾವ ಪರ್ವತದ ಮೇಲೆ ಲಂಕಾ ಪಟ್ಟಣವಿತ್ತು?
4. "ಓದಿದಾ ಓದು ತಾ ಮೇದ ಕಬ್ಬಿನ ಸಿಪ್ಪೆ" ಎಂದವರು ಯಾರು ?
5. ಮಂಡೆಗೆ ಒಗಟುಗಳಂತೆ ಕಸರತ್ತು ನೀಡುವ ದಾಸ ಸಾಹಿತ್ಯ ಯಾವುದು ?
6. 'ಕ್ಯಾಪ್ಟನ್ ಗಮಕಿ' ಎಂದು ಯಾರನ್ನು ಕರೆಯಲಾಗುತ್ತದೆ?
7. "ಬೆರಳ ದರ್ಬೆಯ ಹರಿದು ದೌತಾಂಬರನುಟ್ಟನು ಬಿಗಿದು" ಇದು ಯಾವ ಕಾವ್ಯದ ಸಾಲು?
8. ಜಗನ್ನಾಥ ವಿಜಯ ಯಾವ ಕಾವ್ಯ ಛಂದಸ್ಸಿನಲ್ಲಿ ರಚಿತವಾಗಿದೆ?
9. 64 ಕಲೆಗಳಲ್ಲಿ ಗಮಕವು 38ನೇ ಕಲೆಯೆಂದು ಯಾವ ಗ್ರಂಥ ತಿಳಿಸುತ್ತದೆ ?
10. ರಾಮನಿಗೆ 'ಉಘೇ ಉಘೇ' ಎನ್ನುವ ರಾಮನಾಮವನ್ನು ಧರಿಸಿರುವ ಹಿರಿಯ ಗಮಕಿ ಯಾರು?
11. ತಮಿಳು, ತೆಲುಗು, ಮರಾಠಿ ಭಾಷೆಗೆ ಅನುವಾದಗೊಂಡಿರುವ ಚಾಮರಸನ ಕೃತಿ ಯಾವುದು?
12. ಪಂಪ ರಾಮಾಯಣದ ಮತ್ತೊಂದು ಹೆಸರೇನು ?
13. ವಾಗ್ದೇವಿ ಗಮಕ ಕೇಂದ್ರದ ಸ್ಥಾಪಕರು ಯಾರು ?
14. "ಹೊನ್ನು ತಾ ಗುಬ್ಬಿ ಹೊನ್ನು ತಾ" ಎಂದ ಮಹಿಳಾ ಹರಿದಾಸರು ಯಾರು?
15. ಅಜ್ಞಾತವಾಸದಲ್ಲಿದ್ದ ದ್ರೌಪದಿಯ ಹೆಸರೇನು ?

- ಶ್ರೀಮತಿ ವಿಜಯ ರಂಗನಾಥ್
ಬೆಂಗಳೂರು

**ಗಮಕ ರಸಪ್ರಶ್ನೆ - 2 ರ ಉತ್ತರಗಳು:**
1. ಲವ- ಕುಶ 2. ತೈತ್ತರೀಯ ಉಪನಿಷತ್ತು 3. ಗಮಕ ಭೀಷ್ಮ ಶ್ರೀ ಕೌಶಿಕ್ 4. ಶ್ರೀ ಪುರಂದರದಾಸರು
5. ಶ್ರೀ ಬಸವಪ್ಪ ಶಾಸ್ತ್ರಿ, ಭಾರತದ ಬಿಂದೂ ರಾಯರು, ಕೃಷ್ಣಗಿರಿ ಕೃಷ್ಣರಾಯರು
6. ನರಹರಿ 7. 2010 ಆಗಸ್ಟ್ , ತುಮಕೂರು 8. ಜೈಮಿನಿ ಭಾರತ 9. ದುರ್ಗ ಸಿಂಹ
10. ವಿಜಯ ದಾಸರು 11. ದಿ. ಶಂಕರನಾರಾಯಣರಾವ್ 12. ಜನ್ನ ಕವಿ 13. 1982 ಅಕ್ಟೋಬರ್ 2
14. ಬಾದರಾಯಣ / ಕೃಷ್ಣ ದ್ವೈಪಾಯನ 15. ಶತಾವಧಾನಿ ಆರ್. ಗಣೇಶ್'

ಗಮಕ ರಸಪ್ರಶ್ನೆ'ಗೆ ಸಂಬಂಧಿಸಿದಂತೆ ಸರಿಯಾದ ಉತ್ತರವನ್ನು ಸೆಪ್ಟಂಬರ್ 15, 2018ರ ಒಳಗಾಗಿ ಪೋಸ್ಟ್ ಕಾರ್ಡ್‌ನಲ್ಲಿ ಅಥವಾ ವಾಟ್ಸಪ್(9341392624) ಮೂಲಕ ತಮ್ಮ ವಿಳಾಸದೊಂದಿಗೆ ಕೇವಲ ಉತ್ತರಗಳನ್ನು ಮಾತ್ರ ಕ್ರಮಸಂಖ್ಯೆಯೊಂದಿಗೆ ಬರೆದು ಕಳುಹಿಸಬೇಕು. ಸಂಪೂರ್ಣ ಸರಿಯಾದ ಉತ್ತರವಿರುವ ಇಬ್ಬರು ಅದೃಷ್ಟಶಾಲಿಗಳಿಗೆ ಪುಸ್ತಕ ಬಹುಮಾನದೊಂದಿಗೆ ಮುಂದಿನ ಸಂಚಿಕೆಯಲ್ಲಿ ಅವರನ್ನು ಅಭಿನಂದಿಸುತ್ತೇವೆ.
ಹಿಂದಿನ ಸಂಚಿಕೆಯ ಗಮಕ ರಸಪ್ರಶ್ನೆಗೆ ಉತ್ತರಿಸಿ ಅಭಿನಂದನೆಗೆ ಪಾತ್ರರಾದವರು **ಶ್ರೀಮತಿ ಪ್ರಫುಲ್ಲಾ ಜಗನ್ನಾಥ್**, ಮೈಸೂರು

* ಪತ್ರಿಕೆಯ ಬೆಳವಣಿಗೆಯ ದೃಷ್ಟಿಯಿಂದ ಪ್ರಾಯೋಜಕತ್ವ ಅವಶ್ಯಕವಾಗಿದ್ದು ಪತ್ರಿಕೆಯ ಪ್ರಾಯೋಜಕರಾಗಿ, ಜಾಹೀರಾತುದಾರರಾಗಿ, ಗಮಕ ಪ್ರಚಾರ ಸೇವೆಯ ಕೈಂಕರ್ಯದಲ್ಲಿ ತಾವೂ ಪಾಲ್ಗೊಳ್ಳಬೇಕಾಗಿ ವಿನಂತಿ.

* ಗಮಕ ದುಂದುಭಿಯ ಈ ಹೊಸ ಪ್ರಯತ್ನದ ಬಗ್ಗೆ ನಿಮ್ಮ ಮುಕ್ತ ಅಭಿಪ್ರಾಯಗಳನ್ನು ಹಾಗೂ ಸಲಹೆ - ಸೂಚನೆಗಳನ್ನು ನೀಡಲು 'ಗಮಕ ಚಾವಡಿ' ಎಂಬ ಅಂಕಣ ರೂಪಿಸುವ ಆಲೋಚನೆಯಿದ್ದು, ಐದಾರು ಸಾಲುಗಳನ್ನು ಮೀರದಂತೆ ಚಿಕ್ಕದಾಗಿಯೂ - ಚೊಕ್ಕದಾಗಿಯೂ ನಿಮ್ಮ ಬರಹವಿರಲಿ. - ಸಂಪಾದಕರು

**ವಿಶೇಷ ದಾನಿಗಳು**

| | |
|---|---|
| **ಪ್ರೊ. ವಿ. ಶ್ರೀನಿವಾಸ, ಬೆಂಗಳೂರು** | **- ರೂ. 50,000/-** |
| **ಶ್ರೀ ಸೋಮಶೇಖರ ಗೌಡ, ಶಾಸಕರು ಯಶವಂತಪುರ, ಬೆಂಗಳೂರು** | **- ರೂ. 50,000/-** |

ಪತ್ರಿಕೆಗೆ ಸಂಬಂಧಿಸಿದ ಮಾಹಿತಿಗಾಗಿ ಸಂಪರ್ಕಿಸಿ: **ಕೃ. ಪಾ. ಮಂಜುನಾಥ್**
Mob. 9341392624, Kru.pa.manjunath.krn@gmail.com

# ನಮ್ಮೊಳಗಿನ ವಿಶೇಷತೆಗಳು



ಬಿ.ಕೆ. ಶಾಮಣ್ಣ ಅವರ ಜನ್ಮ ಶತಾಬ್ದಿ ಸಂದರ್ಭದಲ್ಲಿನ ದತ್ತಿ
ಕಾರ್ಯಕ್ರಮದಲ್ಲಿ ಪಾಲ್ಗೊಂಡ ಕಲಾವಿದರಿಗೆ ಗೌರವ ಸಮರ್ಪಣೆ.



ಕನ್ನಡ ಪುಸ್ತಕ ಪ್ರಾಧಿಕಾರದ ಹೊಸ ಯೋಜನೆ
"ಕಥಾಗಮಕ-ಕಥಾಗುಚ್ಛ"ದ ಶುಭಾರಂಭ



ರಾಮನಗರ ಜಿಲ್ಲಾ ಗಮಕ ಪ್ರತಿನಿಧಿ ಹಾಗೂ ವಚನ ಪರಿಚಾರಕರಾದ ಎಲ್ಲೇಗೌಡ ಬೆಸಗರಹಳ್ಳಿ ಅವರ
'ಸಾಧನಾ ಗ್ರಂಥ' ಲೋಕಾರ್ಪಣೆ ಸಮಾರಂಭ



ಮೈಸೂರಿನ 'ಹರಿಪ್ರಿಯ ನಿವಾಸ'ದಲ್ಲಿ ನೆರವೇರಿದ ಅಧಿಕ ಜ್ಯೇಷ್ಠ ಮಾಸದ 'ಗಮಕ ಗಾಯನ ಗೋಷ್ಠಿ'

## ವಿವಿಧೆಡೆಗಳಲ್ಲಿ ನೆರವೇರಿದ "ನೃತ್ಯ-ಗಮಕ-ಗಾಯನ ವೈಭವ"









ತೆರೆದ ಅಂಚೆ

ಗೆ,

____________________

____________________

____________________

ಇಂದ,
**ಕರ್ನಾಟಕ ಗಮಕ ಕಲಾ ಪರಿಷತ್ತು (ರಿ)**
2ನೇ ಮಹಡಿ, ಬಿ.ಎಂ. ಶ್ರೀ. ಪ್ರತಿಷ್ಠಾನ, 3ನೇ ಮುಖ್ಯರಸ್ತೆ,
ಎನ್.ಆರ್. ಕಾಲೋನಿ, ಬೆಂಗಳೂರು-560 019.